info@buntsanghablr.com
buntsanghabangalore@yahoo.in

# ಸ್ನೇಹ ಚಿಂತನೆ

ಮಾಸ ಪತ್ರಿಕೆ

ಜೂನ್ 2026
ಸಂಪುಟ 22 ಸಂಚಿಕೆ 06

ಸಂಚಿಕೆ ಬೆಲೆ ರೂ. 1/–







ಸಮಾಜ ಸೇವಾ ಸಮಿತಿ, ಸೇವಾದಳ ಮತ್ತು ವಿವಾಹ ವೇದಿಕೆ ಸಮಿತಿ – ಸೇವಾ ಸಮಾಗಮ – 2026



ಸಂಕಲ್ಪ ವಿದ್ಯಾರ್ಥಿಗಳ Orientation ಕಾರ್ಯಕ್ರಮ



ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ
– ಶ್ರೀ ದೇವಿ ಮಹಾತ್ಮೆ ಯಕ್ಷಗಾನ

**ಸಮಾಜಮುಖಿ ಸೇವೆ–ನಿಸ್ವಾರ್ಥ ಬದುಕಿನ ನಿಜವಾದ ಅರ್ಥ**

ಬಂಟರ ಸಂಘ ಬೆಂಗಳೂರು
BUNTS' SANGHA BANGALORE
# 324, Bunts' Sangha Complex, Chord Road,
Vijayanagar, Bengaluru - 560040.
P : 080-23399323 / 23399636 | E : info@buntsanghablr.com

DURGAPARAMESHWARI
CHITS

# DURGAPARAMESHWARI CHITS PVT. LTD.

(Govt of Karnataka Approved Chit Company)

Regd. Office: No. 228/B 2nd Floor, 55th Cross, 3rd Block, Rajajinagar, (Near Ramamandira), Bengaluru, - 560010

Email : info@durgaparameshwarichits.in

**MB UMESH SHETTY**
Managing Director
Mobile : 9845025921 | Website: durgaparameshwarichits.in

WEBSITE



LOCATION

Chit Fund is the oldest indigenous financial Institution in India. The term CHIT FUND is known as chit, Chittie or Kuri in different parts of the country. But its operation is same throughout the country. Chit fund is a convenient financial instrument which serves twin purposes of savings and Borrowings by a subscriber. The financial institution, ensuring safest investment, subjecting itself to the control of central and state statutes, which empowers the common man is none other than **DURGAPARAMESHWARI CHITS PVT. LTD.**

## OUR POPULAR CHITS DESIGNED ACCORDING TO YOUR NEED AND CONVENIENCE

| SL.NO. | Monthly Instalment | Period | Chit Amount |
|---|---|---|---|
| 1 | 10,000 | 30 | 3,00,000 |
| 2 | 20000 | 25 | 5,00,000 |
| 3 | 25000 | 40 | 10,00,000 |
| 4 | 50,000 | 30 | 15,00,000 |
| 5 | 50,000 | 40 | 20,00,000 |
| 6 | 70,000 | 30 | 21,00,000 |

| SL.NO. | Monthly Instalment | Period | Chit Amount |
|---|---|---|---|
| 7 | 75,000 | 40 | 30,00,000 |
| 8 | 1,00,000 | 40 | 40,00,000 |
| 9 | 1,25,000 | 40 | 50,00,000 |
| 10 | 2,00,000 | 25 | 50,00,000 |
| 11 | 2,50,000 | 40 | 1,00,00,000 |
| 12 | 5,00,000 | 40 | 2,00,00,000 |

## The Best Reliable Financial Investment Option

**Call : 080-35831843 | 9535544772 | 9845025921 | 9513005556 | 9513005557**





SCAN FOR PAYMENT





ADVT.

# ಸ್ನೇಹ ಚಿಂತನೆ

ಬಂಟರ ಸಂಘ ಬೆಂಗಳೂರು

VOL - 22
JUNE - 2026
ISSUE - 06

Monthly Magazine Published by
**BUNTS' SANGHA BANGALORE**



**ಸಾಹಿತ್ಯ ಪ್ರಕಾಶನ ಸಮಿತಿ**
ಚೇರ್‌ಪರ್ಸನ್ ಮತ್ತು ಗೌರವ ಸಂಪಾದಕರು:
ಶ್ರೀ ರವೀಂದ್ರ ಶೆಟ್ಟಿ ಹಟ್ಟಿಯಂಗಡಿ

**ಸಹ ಸಂಪಾದಕರು:**
ಶ್ರೀ ದೀಪಕ್ ಜೆ. ಶೆಟ್ಟಿ

**ಗೌರವ ಸಲಹೆಗಾರರು:**
ಶ್ರೀ ಎಂ. ಮುರಲೀಧರ ಹೆಗ್ಡೆ
ಶ್ರೀ ಬಾಲಕೃಷ್ಣ ಶೆಟ್ಟಿ (ಎಬಿ ಶೆಟ್ಟಿ)
ಡಾ. ದೀಪಕ್ ಶೆಟ್ಟಿ

**ಸಂಪಾದಕೀಯ ಮಂಡಳಿ**
ಶ್ರೀಮತಿ ನಿರ್ಮಲ ಸಿ. ರೈ
ಶ್ರೀ ಪ್ರಸಾದ್ ಶೆಟ್ಟಿ ಸೀತಾನದಿ
ಶ್ರೀಮತಿ ಸ್ಮಿತಾ ಬಲ್ಲಾಳ್
ಶ್ರೀ ಸತೀಶ್ ಶೆಟ್ಟಿ ವಕ್ವಾಡಿ
ಶ್ರೀ ಸಂದೀಪ್ ಹೆಗ್ಗದ್ದೆ
ಶ್ರೀಮತಿ ಶ್ಯಾಮಲ ಶೆಟ್ಟಿ

**ಪತ್ರಿಕಾ ಸಲಹಾ ವಿಭಾಗ:**
ಸಮಾಜ ಸೇವೆ ವಿಭಾಗ: ಶ್ರೀ ಜಯರಾಮ ಶೆಟ್ಟಿ ನೂಜಾಡಿ
ಕಾನೂನು ಸಲಹೆಗಾರರು: ಶ್ರೀಮತಿ ಸುಪ್ರೀತಾ ಕೆ. ಶೆಟ್ಟಿ
ಆರೋಗ್ಯ ಮಾಹಿತಿ ವಿಭಾಗ: ಡಾ. ಶಾಲ್ಮಲೀ ಸುರೇಶ್
ಮನೋರಂಜನಾ ವಿಭಾಗ: ಶ್ರೀಮತಿ ರೇವತಿ ಶೆಟ್ಟಿ
ಶೈಕ್ಷಣಿಕ ವಿಭಾಗ: ಶ್ರೀಮತಿ ನಂದಿನಿ ನಾಗರಾಜ್ ಶೆಟ್ಟಿ
ಕ್ರೀಡಾ ವಿಭಾಗ: ಶ್ರೀ ನವೀನ್ ಶೆಟ್ಟಿ

**ಪೋಷಕ ಸದಸ್ಯರು:**
ಶ್ರೀಮತಿ ಮನೋರಮ ಚೌಟ
ಶ್ರೀಮತಿ ವೇದ ಎಸ್. ಶೆಟ್ಟಿ
ಶ್ರೀ ಬಿ. ಕುಸುಮಾಕರ ಶೆಟ್ಟಿ
ಶ್ರೀ ಆರ್.ಎಸ್. ಶೆಟ್ಟಿ
ಶ್ರೀಮತಿ ವಸಂತಿ ಪಿ. ಶೆಟ್ಟಿ
ಶ್ರೀ ಪ್ರಕಾಶ್ ಶೆಟ್ಟಿ
ಶ್ರೀ ಎ. ಜೆ. ಶೆಟ್ಟಿ
ಶ್ರೀಮತಿ ಗೀತ ಭಗವಾನ್‌ದಾಸ್ ರೈ
ಶ್ರೀ ಶ್ರೀನಿವಾಸ ಸೂಡ

**ಪ್ರಕಾಶಕರು:**
ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ


## ಒಳ ಪುಟಗಳಲ್ಲಿ.....


| | ಪುಟ |
|---|---|
| ಸಂಪಾದಕೀಯ | 2 |
| ಅಧ್ಯಕ್ಷರ ಮಾತು | 3 |
| ಗೌರವ ಕಾರ್ಯದರ್ಶಿಯವರ ವರದಿ | 4 |
| ಸಮಾಜ ಸೇವಾ ಸಮಿತಿ ಮತ್ತು ಸೇವಾದಳ, ಸೇವಾ ಸಮಾಗಮ–2026 | 5 |
| Bunts' Sangha R.N.S Composite PU College Orientation Day 2026 - 27, Report | 7 |
| ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–II ಉದ್ಘಾಟನೆಗೊಳ್ಳಲಿರುವ ಮತ್ತು ಭೋಜನ ಶಾಲಾ ಕಟ್ಟಡಗಳು | 9 |
| ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ 2024–26 | 10 |
| ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–II ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಓರಿಯೆಂಟೇಶನ್ ಕಾರ್ಯಕ್ರಮ | 11 |
| ವಿವಾಹ ವೇದಿಕೆ ಸಮಿತಿ–ಸೇವಾ ಸಮಾಗಮ–2026 | 13 |
| ಆಡಳಿತ ಮಂಡಳಿಯ ಆಯ್ಕೆ ಚುನಾವಣೆ – 2026–29 | 15 |
| ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ ವಿದ್ಯಾರ್ಥಿವೇತನ ಯೋಜನೆ – 'ವಿದ್ಯಾ ದೀವಿಗೆ' | 16 |
| ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ, ಯಕ್ಷಸಂಭ್ರಮ – 'ಶ್ರೀ ದೇವಿ ಮಹಾತ್ಮೆ ಯಕ್ಷಗಾನ' | 19 |
| Bunts Sangha RNS Vidyaniketan - I Workshop Report | 24 |
| Calendar of Events : ELECTION – 2026-29 | 26 |


**ಮುಖ ಪುಟ**

ಸಮಾಜ ಸೇವಾ ಸಮಿತಿ, ಸೇವಾದಳ ಮತ್ತು
ವಿವಾಹ ವೇದಿಕೆ ಸಮಿತಿ – ಸೇವಾ ಸಮಾಗಮ – 2026
ಸಂಕಲ್ಪ ವಿದ್ಯಾರ್ಥಿಗಳ Orientation ಕಾರ್ಯಕ್ರಮ
ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ
ಶ್ರೀ ದೇವಿ ಮಹಾತ್ಮೆ ಯಕ್ಷಗಾನ


ಈ ಸಂಚಿಕೆಯಲ್ಲಿ ಪ್ರಕಟವಾದ ಜಾಹೀರಾತು ಮತ್ತು ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಚಂದಾದಾರರು ಮತ್ತು ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ – ಸಂಪಾದಕ ಮಂಡಳಿ

# ಸಂಪಾದಕೀಯ



### ಸಮಾಜಮುಖಿ ಸೇವೆ–ನಿಸ್ವಾರ್ಥ ಬದುಕಿನ ನಿಜವಾದ ಅರ್ಥ

ಸಮಾಜವೆಂದರೆ ಕೇವಲ ಜನರ ಸಮೂಹವಲ್ಲ; ಅದು ಪರಸ್ಪರ ಸಹಕಾರ, ವಿಶ್ವಾಸ ಮತ್ತು ಮಾನವೀಯ ಮೌಲ್ಯಗಳ ಮೇಲೆ ನಿಂತಿರುವ ಜೀವಂತ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರ ಪಾತ್ರವೂ ಅತಿ ಮಹತ್ವದ್ದಾಗಿದೆ. ನಾವು ಬದುಕುತ್ತಿರುವ ಈ ಸಮಾಜಕ್ಕೆ ನಾವು ಏನು ಕೊಡುಗೆ ನೀಡುತ್ತಿದ್ದೇವೆ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವಾಗಲೇ ಬದುಕಿನ ನಿಜವಾದ ಅರ್ಥ ಸಿಗುತ್ತದೆ.

ನಿಸ್ವಾರ್ಥ ಸೇವೆ ಎಂಬುದು ಹಣ ಅಥವಾ ಸ್ಥಾನಮಾನದಿಂದ ಅಳೆಯುವ ವಿಷಯವಲ್ಲ. ಅದು ಹೃದಯದಿಂದ ಹೊರಹೊಮ್ಮುವ ಮಾನವೀಯ ಭಾವನೆ. ಸಹಾಯದ ಕೈಚಾಚುವುದು, ಸಂಕಷ್ಟದಲ್ಲಿರುವವರಿಗೆ ಧೈರ್ಯ ನೀಡುವುದು ಅವಕಾಶ ವಂಚಿತರ ಬೆಳವಣಿಗೆಗೆ ಬೆಂಬಲವಾಗುವುದು ಇವೆಲ್ಲವೂ ಸಮಾಜಮುಖಿ ಸೇವೆಯ ನಿಜವಾದ ರೂಪಗಳು.

ನಮ್ಮ ಸಮಾಜದ ಪರಂಪರೆಯನ್ನು ನೋಡಿದರೆ, ಅದು ಶ್ರಮ, ಶಿಸ್ತು, ಏಕತೆ ಮತ್ತು ಸೇವಾಭಾವದಿಂದ ಸದಾ ಬೆಳೆಯುತ್ತ ಬಂದಿದೆ. ಶಿಕ್ಷಣ, ಉದ್ಯಮ, ಕೃಷಿ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ನಮ್ಮ ಸಮಾಜದ ಕೊಡುಗೆಗಳು ಇಂದು ಅನೇಕ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿವೆ. ಈ ಸಾಧನೆಗಳ ಹಿಂದೆ ಹಿರಿಯರ ದೂರದೃಷ್ಟಿ ಮತ್ತು ಯುವಶಕ್ತಿಯ ಶ್ರಮ ಒಂದಾಗಿ ಕೆಲಸ ಮಾಡಿರುವುದು ಸ್ಪಷ್ಟ.

ಈ ಹಿನ್ನೆಲೆಯಲ್ಲಿ ರಾಧಾಬಾಯಿ ತಿಮ್ಮಪ್ಪ ಭಂಡಾರಿಯವರ ಭೂ ದಾನದಂತಹ ಮಹತ್ವದ ದಾನಾತ್ಮಕ ಕೊಡುಗೆಗಳು ಸಮಾಜದ ಸೇವಾ ಚಟುವಟಿಕೆಗಳಿಗೆ ಹೊಸ ದಾರಿ ತೆರೆದಿವೆ. ಅವರಂತಹ ಮಹನೀಯರ ತ್ಯಾಗ ಮತ್ತು ದಾನಶೀಲತೆಗಳಿಂದ ಪ್ರೇರಿತವಾಗಿ ಬೆಂಗಳೂರಿನ ಬಂಟರ ಸಂಘವು ಉನ್ನತ ಮಟ್ಟದಲ್ಲಿ ಬೆಳೆಯಲು ಸಾಧ್ಯವಾಗಿದ್ದು, ಉಳ್ಳವರಿಂದ ಪಡೆದು ಬಡವರ ಸೇವೆ ಮಾಡುವ ಮಹತ್ತರ ಅವಕಾಶವನ್ನು ಸಮಾಜಕ್ಕೆ ನೀಡಿದೆ. ಇದು ಸಮಾಜಮುಖಿ ಸೇವೆಯ ನಿಜವಾದ ಅರ್ಥವನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ.

ಸಂಘ ಸ್ಥಾಪನೆಯಾದ ದಿನದಿಂದ ಇಂದಿನವರೆಗೂ ಬೆಂಗಳೂರು ಬಂಟರ ಸಂಘದ ಹಿರಿಯರು, ಮಾರ್ಗದರ್ಶಕರು, ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರು ಸಲ್ಲಿಸಿರುವ ಶ್ರಮ, ತ್ಯಾಗ ಮತ್ತು ನಿಸ್ವಾರ್ಥ ಸೇವೆಯನ್ನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ಸ್ಮರಿಸಬೇಕು. ಪ್ರತಿಯೊಂದು ಹಂತದಲ್ಲಿಯೂ ಸಂಘದ ಬೆಳವಣಿಗೆಗಾಗಿ ಶ್ರಮಿಸಿದ ಎಲ್ಲ ಸಮಿತಿಯ ಸದಸ್ಯರ ಕೊಡುಗೆಗಳು ಇಂದಿನ ಬಲಿಷ್ಠ ಸಂಘಟನೆಯ ಆಧಾರಶಿಲೆಯಾಗಿವೆ. ಅವರ ಪರಿಶ್ರಮವೇ ಸಂಘದ ಗೌರವ ಮತ್ತು ಸಾಧನೆಗಳಿಗೆ ಮೂಲ ಕಾರಣವಾಗಿದೆ.

ಸಮಾಜಮುಖಿ ಕಾರ್ಯಗಳು ವ್ಯಕ್ತಿಯ ಅಂತರಂಗವನ್ನು ಶ್ರೀಮಂತಗೊಳಿಸುತ್ತವೆ. ನಾವು ಇತರರ ಜೀವನದಲ್ಲಿ ಬೆಳಕು ನೀಡಿದಾಗ, ನಮ್ಮ ಜೀವನವೂ ಬೆಳಗುತ್ತದೆ. ನಿಜವಾದ ಸಂತೋಷವು ಸ್ವಾರ್ಥದಲ್ಲಿ ಅಲ್ಲ, ಸೇವೆಯಲ್ಲಿ ಅಡಗಿದೆ. ಈ ಸೇವಾಭಾವವೇ ವ್ಯಕ್ತಿಯನ್ನು ಸಮಾಜದ ಹೃದಯಕ್ಕೆ ಕೊಂಡೊಯ್ಯುತ್ತದೆ.

ಬಡ ಮಕ್ಕಳ ಶಿಕ್ಷಣಕ್ಕೆ ಸಹಾಯ, ಆರೋಗ್ಯ ಶಿಬಿರಗಳು, ರಕ್ತದಾನ, ಪರಿಸರ ಸಂರಕ್ಷಣೆ ಹಾಗೂ ಸಾಮಾಜಿಕ ಜಾಗೃತಿ ಕಾರ್ಯಗಳು ಇವುಗಳು ನಿಸ್ವಾರ್ಥ ಸೇವೆಯ ಸ್ಪಷ್ಟ ಉದಾಹರಣೆಗಳು. ಇಂತಹ ಕಾರ್ಯಗಳು ಕೇವಲ ಸಮಾಜವನ್ನು ಮಾತ್ರವಲ್ಲ, ನಮ್ಮ ಆತ್ಮವನ್ನೂ ಸಮೃದ್ಧಗೊಳಿಸುತ್ತವೆ.

ಇಂದಿನ ಯುವ ಪೀಳಿಗೆ ಈ ಸೇವಾ ಮನೋಭಾವವನ್ನು ತಮ್ಮ ಜೀವನದ ಭಾಗವಾಗಿಸಿಕೊಂಡರೆ, ಸಮಾಜ ಇನ್ನಷ್ಟು ಶಕ್ತಿಶಾಲಿಯಾಗುತ್ತದೆ. ಸಂಘಟನೆಗಳು ಕೇವಲ ಹೆಸರಿಗಾಗಿ ಅಲ್ಲ, ಸಮಾಜ ಪರಿವರ್ತನೆಗೆ ದಿಕ್ಕು ತೋರಿಸುವ ಕೇಂದ್ರಗಳಾಗಬೇಕು.

"ನಾನು ಬದುಕುವುದು ನನಗಾಗಿ ಮಾತ್ರವಲ್ಲ, ಸಮಾಜಕ್ಕಾಗಿ ಕೂಡ" ಎಂಬ ಭಾವನೆ ಬೆಳೆದಾಗಲೇ ಜೀವನ ನಿಜವಾದ ಸಾರ್ಥಕತೆಯನ್ನು ಪಡೆಯುತ್ತದೆ.

**ರವೀಂದ್ರ ಶೆಟ್ಟಿ ಹಟ್ಟಿಯಂಗಡಿ**
**ಸಂಪಾದಕರು**

# ಅಧ್ಯಕ್ಷರ ಮಾತು



ಪ್ರೀತಿಯ ಬಂಟ ಬಾಂಧವರೇ,

**ಉದ್ಯಮೇನ ಹಿ ಸಿಧ್ಯಂತಿ ಕಾರ್ಯಾಣಿ ನ ಮನೋರಥೈ: ।**
**ನ ಹಿ ಸುಪ್ತಸ್ಯ ಸಿಂಹಸ್ಯ ಪ್ರವಿಶಂತಿ ಮುಖೇ ಮೃಗಾ: ॥**

ಕೆಲಸಗಳು ಕೇವಲ ಕನಸುಗಳಿಂದ ಸಿದ್ಧಿಯಾಗುವುದಿಲ್ಲ; ಪರಿಶ್ರಮದಿಂದ ಮಾತ್ರ ಯಶಸ್ಸು ಸಿಗುತ್ತದೆ. ಮಲಗಿರುವ ಸಿಂಹದ ಬಾಯಿಗೆ ಮೃಗಗಳು ತಾವಾಗಿಯೇ ಬರುವುದಿಲ್ಲ.

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ನಲ್ಲಿ ನೂತನವಾಗಿ ನಿರ್ಮಿಸಲಾದ 250ಕ್ಕೂ ಹೆಚ್ಚು ವಿದ್ಯಾರ್ಥಿನಿಯರಿಗೆ ವಸತಿ ಸೌಲಭ್ಯ ಕಲ್ಪಿಸುವ **ವಿದ್ಯಾರ್ಥಿನಿ ನಿಲಯ ಮತ್ತು ಭೋಜನ ಶಾಲೆ**ಯನ್ನು ದಿನಾಂಕ 19.07.2026ರಂದು ಲೋಕಾರ್ಪಣೆಗೊಳಿಸುವ ಕಾರ್ಯಕ್ರಮಕ್ಕೆ ಸದಸ್ಯ ಬಾಂಧವರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ಕೋರುತ್ತೇವೆ.

ವಿದ್ಯಾ ಸಂಕಲ್ಪ ಯೋಜನೆಯಡಿಯಲ್ಲಿ ಈ ವರ್ಷ 125 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ಪ್ರಸ್ತುತ ಒಟ್ಟು 250ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಈ ಯೋಜನೆಯನ್ನು ಶಾಶ್ವತವಾಗಿಸುವ ಉದ್ದೇಶದಿಂದ **'ಬಂಟ್ಸ್ ವಿದ್ಯಾ ಸಂಕಲ್ಪ ನಿಧಿ'** ಯನ್ನು ಸ್ಥಾಪಿಸಿದ್ದು, ಒಬ್ಬ ವಿದ್ಯಾರ್ಥಿಯ 1 ವರ್ಷದ ವಿದ್ಯಾಭ್ಯಾಸಕ್ಕೆ ರೂ. 40,000/– ಅಥವಾ 2 ವರ್ಷಕ್ಕೆ ರೂ. 80,000/– ಅಥವಾ ರೂ. 5,00,000/– ದೇಣಿಗೆ ನೀಡಿದರೆ ಅದನ್ನು ಶಾಶ್ವತ ನಿಧಿಯಾಗಿ ಇಟ್ಟು, ಅದರ ಆದಾಯದಿಂದ ಪ್ರತಿವರ್ಷ ಒಬ್ಬ ವಿದ್ಯಾರ್ಥಿಯ ವಿದ್ಯಾಭ್ಯಾಸಕ್ಕೆ ನೆರವು ನೀಡಲಾಗುತ್ತದೆ. ಈ ಮಹತ್ಕಾರ್ಯಕ್ಕೆ ದಾನಿಗಳು ಹಾಗೂ ಸಹೃದಯಿ ಸದಸ್ಯ ಬಾಂಧವರು ಸಹಕರಿಸುವಂತೆ ವಿನಮ್ರವಾಗಿ ವಿನಂತಿಸುತ್ತೇವೆ.

ಬಂಟರ ಸಂಘದ ಸದಸ್ಯರ ಮೊಬೈಲ್ ಆ್ಯಪ್ ಪೂರ್ಣಗೊಂಡಿದ್ದು, ಇದರ ಮೂಲಕ ಸದಸ್ಯತ್ವ ಅರ್ಜಿ ಸಲ್ಲಿಕೆ, ಸದಸ್ಯತ್ವ ದಾಖಲೆಗಳ ನವೀಕರಣ, ಆಧಾರ್ ಕಾರ್ಡ್ ಮತ್ತು ಇತ್ತೀಚಿನ ಭಾವಚಿತ್ರ ಅಪ್‌ಲೋಡ್, ಸಂಪರ್ಕ ವಿವರಗಳ ತಿದ್ದುಪಡಿ ಮುಂತಾದ ಸೇವೆಗಳನ್ನು ಆನ್‌ಲೈನ್‌ನಲ್ಲಿ ಮಾಡಬಹುದಾಗಿದೆ. ಇದರ ಜೊತೆಗೆ ಸ್ನೇಹಚಿಂತನೆ ಮಾಸಪತ್ರಿಕೆಯ ಡಿಜಿಟಲ್ ಪ್ರತಿಗಳು, ವಧು–ವರರ, ಉದ್ಯೋಗ ಮತ್ತು ಸಂಘದ ಕಾರ್ಯಕ್ರಮಗಳ ಮಾಹಿತಿಯೊಂದಿಗೆ ಇತರ ಉಪಯುಕ್ತ ಸೇವೆಗಳನ್ನು ಸದಸ್ಯರು ಸುಲಭವಾಗಿ ಪಡೆಯಬಹುದು. ಸದಸ್ಯರೊಂದಿಗೆ ಉತ್ತಮ ಸಂಪರ್ಕ ಬೆಳೆಸಿ, ನಮ್ಮ ಸಮುದಾಯವನ್ನು ಇನ್ನಷ್ಟು ಹತ್ತಿರಕ್ಕೆ ತರಲು ಈ **ಮೊಬೈಲ್ ಆ್ಯಪ್** ಒಂದು ಮಹತ್ವದ ಹೆಜ್ಜೆಯಾಗಿದೆ.

ಸಂಘದ ವಾರ್ಷಿಕ ಮಹಾಸಭೆಯು ದಿನಾಂಕ 15.08.2026ರಂದು ನಡೆಯಲಿದ್ದು, ಎಲ್ಲಾ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ಅಮೂಲ್ಯ ಸಲಹೆ ಸೂಚನೆಗಳನ್ನು ನೀಡುವಂತೆ ಕೋರುತ್ತೇವೆ.

ಸಂಘದ 2026–29ರ ಅವಧಿಯ ನೂತನ ಆಡಳಿತ ಮಂಡಳಿಯ ಚುನಾವಣಾ ದಿನಾಂಕವನ್ನು 16.08.2026ರಂದು ನಿಗದಿಪಡಿಸಲಾಗಿದೆ. ನಮ್ಮ ಸಮುದಾಯದವರು ಸಹಜವಾಗಿಯೇ ನಾಯಕತ್ವ ಗುಣಗಳು ಹಾಗೂ ಉತ್ತಮ ವ್ಯಕ್ತಿತ್ವವನ್ನು ಹೊಂದಿರುವುದರಿಂದ ನಾಯಕರನ್ನು ಸೃಷ್ಟಿಸುವ ಅಗತ್ಯವಿರುವುದಿಲ್ಲ. ಆದ್ದರಿಂದ ಸಣ್ಣ ಪುಟ್ಟ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ನಾವೆಲ್ಲರೂ ಒಂದೇ ಕುಟುಂಬದವರು ಎಂಬ ಭಾವನೆಯೊಂದಿಗೆ **ಸಂಘದ ಅಭಿವೃದ್ಧಿಗಾಗಿ ಚುನಾವಣೆ ಇಲ್ಲದೇ ಜವಾಬ್ದಾರಿಯುತ ನಾಯಕರನ್ನು ಸರ್ವಾನುಮತದಿಂದ ಆಯ್ಕೆ ಮಾಡಲು ಸಹಕಾರ ನೀಡುವಂತೆ** ಈ ಮೂಲಕ ಮತ್ತೊಮ್ಮೆ ಕೇಳಿಕೊಳ್ಳುತ್ತೇವೆ.

**ಇಂತಿ ತಮ್ಮ ಪ್ರೀತಿಯ**
**ಸಿಎ. ಅಶೋಕ್ ಶೆಟ್ಟಿ ಎಂ**
**ಅಧ್ಯಕ್ಷರು**

# ಗೌರವ ಕಾರ್ಯದರ್ಶಿಯವರ ವರದಿ



ಮಾನ್ಯರೇ,

ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ಯಲಚಗುಪ್ಪೆ ಶಾಲೆಯ ಆವರಣದಲ್ಲಿ ನೂತನವಾಗಿ ನಿರ್ಮಿಸಲಾದ ವಿದ್ಯಾರ್ಥಿನಿ ನಿಲಯ ಮತ್ತು ಭೋಜನ ಶಾಲೆಯ ಉದ್ಘಾಟನಾ ಸಮಾರಂಭ ಹಾಗೂ ನಮ್ಮ ಸಂಘದ ಸದಸ್ಯರಿಗಾಗಿ ಹೊಸದಾಗಿ ಪರಿಚಯಿಸುತ್ತಿರುವ ಮೊಬೈಲ್ ಆ್ಯಪ್‌ನ ಅನಾವರಣ ಕಾರ್ಯಕ್ರಮವನ್ನು ದಿನಾಂಕ 19.07.2026ರಂದು ಆಯೋಜಿಸಲಾಗಿದೆ. ಸದಸ್ಯರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.

ದಿನಾಂಕ 15.08.2026ರಂದು ಸಂಘದ ವಾರ್ಷಿಕ ಮಹಾಸಭೆಯು ನಡೆಯಲಿದ್ದು, ಸದಸ್ಯರೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸಲಹೆ ಸೂಚನೆಗಳನ್ನು ನೀಡಬೇಕಾಗಿ ವಿನಂತಿ. 2026–29ನೇ ಸಾಲಿನ ಸಂಘದ ನೂತನ ಆಡಳಿತ ಮಂಡಳಿ ಆಯ್ಕೆಗಾಗಿ ಚುನಾವಣಾ ಪ್ರಕ್ರಿಯೆಗಳನ್ನು ಈಗಾಗಲೇ ಪ್ರಾರಂಭಿಸಲಾಗಿದ್ದು, ದಿನಾಂಕ 16.08.2026ರಂದು ಚುನಾವಣಾ ದಿನಾಂಕವನ್ನು ನಿಗದಿಪಡಿಸಲಾಗಿದೆ. ಈಗಾಗಲೇ ಚುನಾವಣಾ ವೇಳಾಪಟ್ಟಿಯನ್ನು ಸದಸ್ಯರೆಲ್ಲರಿಗೂ ಅಂಚೆ ಮೂಲಕ ಕಳುಹಿಸಲಾಗಿದೆ ಹಾಗೂ ಸ್ನೇಹ ಚಿಂತನೆಯಲ್ಲೂ ಪ್ರಕಟಿಸಲಾಗಿದೆ. ಕರ್ನಾಟಕ ಸರಕಾರದ ಸೊಸೈಟಿ ಕಾಯ್ದೆಗನುಗುಣವಾಗಿ ಮೇ, 2, 2026ರ ವಿಶೇಷ ಮಹಾಸಭೆಯಲ್ಲಿ ಮಾಡಲಾದ ಬೈಲಾ ತಿದ್ದುಪಡಿಯನ್ವಯ ಮಾನ್ಯ ಸಂಘ–ಸಂಸ್ಥೆಗಳ ರಿಜಿಸ್ಟ್ರಾರ್‌ರವರ ಅಂತಿಮ ಒಪ್ಪಿಗೆಯಂತೆ ಮುಂಬರುವ ಚುನಾವಣೆಗೆ ನೂತನ ಬೈಲಾದಲ್ಲಿನ ಎಲ್ಲಾ ನಿಬಂಧನೆಗಳು ಅನ್ವಯವಾಗಲಿದೆ.

ಸಂಕಲ್ಪ ಯೋಜನೆಯಡಿಯಲ್ಲಿ ಆಯ್ಕೆಯಾದ ವಿದ್ಯಾರ್ಥಿಗಳ Orientation ಕಾರ್ಯಕ್ರಮವನ್ನು ದಿನಾಂಕ 01.06.2026ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–II ಶಾಲಾ ಆವರಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾನಸಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಡಾ. ರಜನಿ ಪಿ. ರವರು ಭಾಗವಹಿಸಿದ್ದರು. ಈ ಬಾರಿ ಒಟ್ಟು 125 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದ್ದು, ನಮ್ಮ ಸಮುದಾಯದ ವಿದ್ಯಾರ್ಥಿಗಳ ಉಚಿತ ಶಿಕ್ಷಣಕ್ಕೆ ಸಂಘದ ಜೊತೆ ದಾನಿಗಳು ಕೈಜೋಡಿಸಬೇಕಾಗಿ ವಿನಂತಿ.

ದಿನಾಂಕ 28.05.2026ರಂದು ಸಮಾಜ ಸೇವಾ ಸಮಿತಿ, ಸೇವಾದಳ ಮತ್ತು ವಿವಾಹ ವೇದಿಕೆ ಸಮಿತಿಯ ವತಿಯಿಂದ "ಸೇವಾ ಸಮಾಗಮ –2026" ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸಭಾ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಂಗಳೂರು ಉತ್ತರ ಕ್ಷೇತ್ರದ ಮಾನ್ಯ ಶಾಸಕರಾದ ಡಾ. ವೈ ಭರತ್ ಶೆಟ್ಟಿಯವರು ಆಗಮಿಸಿದ್ದರು. ಇದೇ ಸಂದರ್ಭದಲ್ಲಿ ಯುವ ಪ್ರತಿಭೆಯಾದ ಶ್ರೀ ಮನೀಶ್ ಶೆಟ್ಟಿಯವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿದ ಸಮಾಜ ಸೇವಾ ಸಮಿತಿಯ ಚೇರ್‌ಪರ್ಸನ್ ಶ್ರೀ ಅಜಿತ್ ಕುಮಾರ್ ಶೆಟ್ಟಿ ಕೆ., ಸಂಚಾಲಕರಾದ ಶ್ರೀ ಕುಶಲ್ ಶೆಟ್ಟಿ, ಸೇವಾದಳ ಸಮಿತಿಯ ಚೇರ್‌ಪರ್ಸನ್ ಶ್ರೀ ಡಿ.ಬಿ. ಪ್ರತಾಪ್ ಶೆಟ್ಟಿ, ಸಂಚಾಲಕರಾದ ಶ್ರೀ ಅಮರನಾಥ್ ಶೆಟ್ಟಿ, ವಿವಾಹ ವೇದಿಕೆ ಸಮಿತಿಯ ಚೇರ್‌ಪರ್ಸನ್ ಶ್ರೀಮತಿ ಗೀತಾ ಶೆಟ್ಟಿ, ಸಂಚಾಲಕರಾದ ಶ್ರೀಮತಿ ಸೇವಂತಿ ಶೆಟ್ಟಿ ಮತ್ತು ಸಮಿತಿಯ ಎಲ್ಲಾ ಸದಸ್ಯರಿಗೂ ಧನ್ಯವಾದಗಳು.

ಕೇಂಬ್ರಿಡ್ಜ್ ಯೂನಿವರ್ಸಿಟಿ ಮುದ್ರಣಾಲಯದ ಸಹಯೋಗದೊಂದಿಗೆ ದಿನಾಂಕ 22.05.2026ರಂದು ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತ–II ಶಾಲೆಯ ಶಿಕ್ಷಕರಿಗೆ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ದಿನಾಂಕ 25.05.2026ರಂದು ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ಆಯೋಜಿಸಲಾದ ಬಂಟರ ಸಂಘ ಆರ್.ಎನ್. ಎಸ್ ವಿದ್ಯಾನಿಕೇತನ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಥಮ ಪಿಯುಸಿ ವಿದ್ಯಾರ್ಥಿಗಳ Orientation ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಪರಮಪೂಜ್ಯ ನಿರ್ಭಯಾನಂದ ಸರಸ್ವತಿ ಸ್ವಾಮೀಜಿಯವರು ಆಗಮಿಸಿದ್ದರು.

ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯ ವತಿಯಿಂದ ದಿನಾಂಕ 06.06.2026ರಂದು "ಶ್ರೀ ದೇವಿ ಮಹಾತ್ಮೆ" ಯಕ್ಷಗಾನವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿದ ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯ ಚೇರ್‌ಪರ್ಸನ್ ಶ್ರೀ ಎಂ. ಸಂತೋಷ್ ಕುಮಾರ್ ಶೆಟ್ಟಿ, ಸಂಚಾಲಕರಾದ ಶ್ರೀ ಚರಣ್‌ರಾಜ್ ಶೆಟ್ಟಿ ಮತ್ತು ಅವರ ತಂಡಕ್ಕೆ ಅಭಿನಂದನೆಗಳು.

ಇಂತಿ ತಮ್ಮ ಪ್ರೀತಿಯ

**ವಿಜಯ್ ಜೆ. ಶೆಟ್ಟಿ ಹಾಲಾಡಿ**

ಗೌರವ ಕಾರ್ಯದರ್ಶಿ

# ಬಂಟರ ಸಂಘ ಬೆಂಗಳೂರು
# ಸಮಾಜ ಸೇವಾ ಸಮಿತಿ ಮತ್ತು ಸೇವಾದಳ
# "ಸೇವಾ ಸಮಾಗಮ-2026"



ಬೆಂಗಳೂರು ಬಂಟರ ಸಂಘದ ಸಮಾಜ ಸೇವಾ ಸಮಿತಿ, ಸೇವಾದಳ ಮತ್ತು ವಿವಾಹ ವೇದಿಕೆ ಸಮಿತಿಯ ವತಿಯಿಂದ ದಿನಾಂಕ 28.05.2026ರಂದು ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ಸೇವಾ ಸಮಾಗಮ-2026 ಕಾರ್ಯಕ್ರಮನ್ನು ಬಹಳ ಅರ್ಥಪೂರ್ಣವಾಗಿ ಆಯೋಜಿಸಲಾಗಿತ್ತು.



ಬೆಳಿಗ್ಗೆ ಶ್ರೀ ವರಸಿದ್ದಿ ವಿನಾಯಕನಿಗೆ ಪೂಜೆ ಸಲ್ಲಿಸಿ, ನಂತರ ಸಂಘದ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಕಾರ್ಯಕ್ರಮದ ಕಾರ್ಯಕಾರಿ ಸಮಿತಿ ಸದಸ್ಯರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಭಾರತ ಸರಕಾರದ ಅಂಚೆ ಇಲಾಖೆಯ ಸಹಯೋಗದೊಂದಿಗೆ ಅಂಚೆ ಇಲಾಖೆಯ ಸಿಬ್ಬಂದಿಗಳು ಇಲಾಖೆಯ ವಿವಿಧ ಸೌಲಭ್ಯಗಳ ಮಾಹಿತಿಯನ್ನು ನೀಡಿದರು. ಸ್ಪರ್ಶ್ ಆಸ್ಪತ್ರೆ ಮತ್ತು ಲಯನ್ಸ್ ಕ್ಲಬ್ ಆಫ್ ಬೆಂಗಳೂರು ಎಲೈಟ್‌ರವರ ಸಹಯೋಗದೊಂದಿಗೆ ಉಚಿತ ರಕ್ತದಾನ ಶಿಬಿರ, ಉಚಿತ ವೈದ್ಯಕೀಯ ತಪಾಸಣಾ ಶಿಬಿರ, ಉಚಿತ ದಂತ ತಪಾಸಣಾ ಶಿಬಿರ, ಉಚಿತ ನೇತ್ರ ತಪಾಸಣಾ ಶಿಬಿರವನ್ನು ನಡೆಸಲಾಯಿತು. ಸುಮಾರು 1000 ಕ್ಕೂ ಅಧಿಕ ಜನರು ಈ ಎಲ್ಲಾ ಸೌಲಭ್ಯಗಳ ಪ್ರಯೋಜವನ್ನು ಪಡೆದರು.








ಸುಮಾರು 50 ಯುನಿಟ್‌ಗೂ ಅಧಿಕ ರಕ್ತವನ್ನು ಸಂಗ್ರಹಿಸಿದ್ದು, ಸಂಗ್ರಹಿಸಲಾದ ರಕ್ತವನ್ನು ಸಮಾಜ ಸೇವಾ ಸಮಿತಿಯ ಚೇರ್‌ಪರ್ಸನ್ ಶ್ರೀ ಅಜಿತ್ ಕುಮಾರ್ ಶೆಟ್ಟಿ ಕೆ.ರವರು ಲಯನ್ಸ್ ಸಂಸ್ಥೆಗೆ ಹಸ್ತಾಂತರಿಸಿದರು.




ಸಂಜೆಯ ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕರಾದ ಡಾ. ವೈ. ಭರತ್ ಶೆಟ್ಟಿಯವರು ಆಗಮಿಸಿದ್ದರು. ಸಮಾಜ ಸೇವಾ ಸಮಿತಿಯ ಚೇರ್‌ಪರ್ಸನ್ ಶ್ರೀ ಕೆ. ಅಜಿತ್ ಕುಮಾರ್ ಶೆಟ್ಟಿಯವರು

ವೇದಿಕೆಯ ಮೇಲೆ ವಿರಾಜಮಾನರಾಗಿದ್ದ ಅತಿಥಿಗಳನ್ನು, ಪದಾಧಿಕಾರಿಗಳನ್ನು ಮತ್ತು ನೆರೆದ ಸಭಿಕರನ್ನು ಸ್ವಾಗತಿಸಿ, ಹೊಲಿಗೆ ಯಂತ್ರಕ್ಕೆ ಸುಮಾರು 138ಕ್ಕೂ ಅಧಿಕ ಅರ್ಜಿಗಳು ಬಂದಿದ್ದು, ಅವುಗಳನ್ನು ಪರಿಶೀಲಿಸಿ 46 ಜನರಿಗೆ ಹೊಲಿಗೆ ಯಂತ್ರವನ್ನು ಈ ಸಂದರ್ಭದಲ್ಲಿ ನೀಡುತ್ತಿದ್ದೇವೆ, ಉಳಿದವರಿಗೆ ಮುಂದಿನ ದಿನಗಳಲ್ಲಿ ದಾನಿಗಳಿಂದ ಸಂಗ್ರಹಿಸಿ ನೀಡಲಾಗುವುದು ಎಂದರು. ಗೌರವ ಕಾರ್ಯದರ್ಶಿಯವರಾದ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿಯವರು ಪ್ರಾಸ್ತಾವಿಕ ನುಡಿಗಳನ್ನಾಡಿ 200ಕ್ಕೂ ಅಧಿಕ ಮಕ್ಕಳಿಗೆ ಸಂಕಲ್ಪ ಯೋಜನೆಯಡಿಯಲ್ಲಿ ಉಚಿತ ಪಿಯುಸಿ ಶಿಕ್ಷಣ ಮತ್ತು ವಸತಿ ಸೌಲಭ್ಯಗಳನ್ನು ನೀಡುತ್ತಾ ಬಂದಿದ್ದೇವೆ. ಸಂಘವು ಸದಾ ಆರ್ಥಿಕ ಸಂಕಷ್ಟದಲ್ಲಿರುವ ಪ್ರತಿಯೊಬ್ಬರ ಕಷ್ಟದಲ್ಲಿ ಭಾಗಿಯಾಗಿ ಸಮಾಜ ಮುಖಿ ಕೆಲಸದಲ್ಲಿ ತೊಡಗಿಕೊಂಡಿದೆ ಎಂದರು. ಕಾರ್ಯಕ್ರಮದಲ್ಲಿ ಯುವ ಪ್ರತಿಭೆ ಶ್ರೀ ಮನೀಶ್ ಶೆಟ್ಟಿಯವರನ್ನು ಸನ್ಮಾನಿಸಲಾಯಿತು.




ವಿದ್ಯುತ್ ಅವಘಡದಿಂದ ಹಾನಿಯಾದ ಬ್ರಹ್ಮಲಿಂಗೇಶ್ವರ ಕಾಂಡಿಮೆಂಟ್ಸ್ ಮಾಲೀಕರಿಗೆ ಕಾರ್ಯಕಾರಿ ಸಮಿತಿಯ ಸದಸ್ಯರಿಂದ ಸಂಗ್ರಹಿಸಲಾದ ರೂ. ಒಂದು ಲಕ್ಷ ಮೊತ್ತವನ್ನು ಚೆಕ್ ಮೂಲಕ ನೀಡಲಾಯಿತು.

ಸಭಾಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಸಿ.ಎ. ಅಶೋಕ್ ಶೆಟ್ಟಿ ಎಂ.ರವರು ವಹಿಸಿದ್ದರು. ಅಧ್ಯಕ್ಷೀಯ ಮಾತುಗಳನ್ನಾಡಿ ಸಂಘ ಮತ್ತು ಸಮಾಜ ಸದಾ ನೊಂದವರ ಪರ ನಿಂತಿದ್ದು, ಸದಸ್ಯರ ಸಮಸ್ಯೆಗಳಿಗೆ ತತ್‌ಕ್ಷಣ ಪರಿಹಾರ ನೀಡುವ ಕೆಲಸವನ್ನು ಮಾಡುತ್ತಾ ಬಂದಿದ್ದು, ಶಿಕ್ಷಣಕ್ಕೆ ಹೆಚ್ಚಿನ ಒತ್ತನ್ನು ನೀಡುತ್ತಾ ಬಂದಿದ್ದೇವೆ ಎಂದರು. ಕಾರ್ಯಕ್ರಮವನ್ನು ಆಯೋಜಿಸಿದ ಸಮಾಜ ಸೇವಾ ಸಮಿತಿಯವರನ್ನು ಶ್ಲಾಘಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಸೇವಾದಳದ ಚೇರ್‌ಪರ್ಸನ್ ಶ್ರೀ ಡಿ.ಬಿ. ಪ್ರತಾಪ್ ಶೆಟ್ಟಿಯವರು ಧನ್ಯವಾದ ಸಮರ್ಪಿಸಿದರು. ಶ್ರೀಮತಿ ನಂದಿನಿ ಶೆಟ್ಟಿಯವರು ಅಚ್ಚುಕಟ್ಟಾಗಿ ಕಾರ್ಯಕ್ರಮವನ್ನು ನಿರೂಪಿಸಿದರು.



ಸಭಾ ಕಾರ್ಯಕ್ರಮದ ನಂತರ ಪ್ರದರ್ಶನಗೊಂಡ ಸಾಮಾಜಿಕ ಕಳಕಳಿಯ ಐತಿಹಾಸಿಕ ನಾಟಕ ಛತ್ರಪತಿ ಶಿವಾಜಿಯು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು. ಕಾರ್ಯಕ್ರಮಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು.

**ನೇರ ಪಾಯೋಜಕತ್ವ ನೀಡಿ ಸಹಕರಿಸಿದವರು;**

ಶ್ರೀ ಸುನೀಲ್ ಕುಮಾರ್ ಶೆಟ್ಟಿ    ಶ್ರೀ ಅಜಿತ್ ವಿ. ಶೆಟ್ಟಿ

**ದೇಣಿಗೆ ನೀಡಿದವರು:–**

| | | |
|---|---|---|
| ಶ್ರೀ ವೀರಭದ್ರ ಕೆ. ಬ್ಯಾಡಗಿ | ಲೋಕಲಿ ಗ್ರೂಮ್ಡ್ | ಆರ್. ಕೆ. ಅಸೋಸಿಯೇಟ್ಸ್ |
| ಇಂಡಿಯಾ ಫಸ್ಟ್ ಲೈಫ್ ಬೆಂಗಳೂರು | ಪೇಹೋಯ್ ಅಸೋಸಿಯೇಟ್ಸ್ | ಶ್ರೀ ಸಂದೀಪ್ ಶೆಟ್ಟಿ |
| ಶ್ರೀ ಚಂದ್ರಶೇಖರ್ ಶೆಟ್ಟಿ | ಶ್ರೀಮತಿ ರಶ್ಮಿ ಆಳ್ವ | ಶ್ರೀಮತಿ ಪ್ರಿಯಾಂಕ ಗೌಡ |
| ಶ್ರೀಮತಿ ಗೀತಾ ಶೆಟ್ಟಿ | | |

**ಅಜಿತ್ ಕುಮಾರ್ ಶೆಟ್ಟಿ ಕೆ.**
ಚೇರ್‌ಪರ್ಸನ್, ಸಮಾಜ ಸೇವಾ ಸಮಿತಿ

**ಕುಶಲ ಶೆಟ್ಟಿ**
ಸಂಚಾಲಕರು, ಸಮಾಜ ಸೇವಾ ಸಮಿತಿ

**ಡಿ. ಬಿ. ಪ್ರತಾಪ್ ಶೆಟ್ಟಿ**
ಚೇರ್‌ಪರ್ಸನ್, ಸೇವಾದಳ

**ಅಮರನಾಥ ಶೆಟ್ಟಿ**
ಸಂಚಾಲಕರು, ಸೇವಾದಳ

# Bunts' Sangha R.N.S Composite PU College Orientation Day 2026 - 27 Report

I PUC Orientation Programme was held on $25^{th}$ May 2026 at RTB Auditorium. The programme began with a welcome dance by $2^{nd}$ PUC students. The dignitaries were escorted to the dais. Paramapoojya Swami Nirbhayananda Saraswati Swamiji was the Chief Guest.CA Ashok Shetty M, Chairman & President of Bunts Sangha, Treasurer Ashok Kumar Shetty and GC Member Vahini Shetty, along with Principal Ms. Usha Santosh, were the dignitaries on the dais.




The Principal officially welcomed the dignitaries. Lighting of the lamp was done by the dignitaries, cultural committee members and toppers of the college. A PPT presentation was given by Mr. Yogendra Shetty and Ms. Shweta Bhat, providing a glimpse of the institution to all the I PUC parents and students.

The Treasurer spoke about the importance of PUC in a student's life. The Chief Guest was introduced by Ms. Vidya B. The esteemed Chief Guest shared insights about Swami Vivekananda's life. He also elaborately spoke about the true potential of being an Indian and how it is yet to be realized by the youth of today.




Next, the GC Member spoke about aiming higher in life, quoting the words of Kuvempu and emphasizing the joint responsibility of teachers and parents in shaping a child's future.

Felicitation of II PUC toppers of Science and Commerce streams, along with centum scorers, was done by the dignitaries and EC members. Sharing of thoughts was done by Ms. Prarthana Shetty and Ms. Vedashree.

Induction of Lecturers, Office staff and Attenders was done by the Principal Madam. Rules and regulations of the institution were explained to the parents by the Principal.

The vote of thanks was proposed by Ms. Mamatha B. V. The programme came to an end with the singing of the National Anthem.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ - II

## ವಿದ್ಯಾರ್ಥಿನಿ ನಿಲಯ ಮತ್ತು ಭೋಜನ ಶಾಲೆ ಉದ್ಘಾಟನೆ

**ಸ್ಥಳ:** ಬಂಟರ ಸಂಘ, ಆರ್.ಎನ್.ಎಸ್. ವಿದ್ಯಾನಿಕೇತನ-II ಶಾಲಾ ಆವರಣ, ಯಲಚಗುಪ್ಪೆ ಗ್ರಾಮ, ತಾವರೆಕೆರೆ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು

**ದಿನಾಂಕ:** 18.07.2026, ಶನಿವಾರ, ಸಂಜೆ 5.00 ರಿಂದ
ವಾಸ್ತು ಪೂಜೆ ಮತ್ತು ಸುದರ್ಶನ ಹೋಮ

**ದಿನಾಂಕ:** 19.07.202026, ಭಾನುವಾರ, ಬೆಳಗ್ಗೆ 7.00ರಿಂದ
ಶ್ರೀ ಸತ್ಯನಾರಾಯಣ ಪೂಜೆ

**ಬೆಳಗ್ಗೆ 10.30ಕ್ಕೆ ಉದ್ಘಾಟನೆ ಹಾಗೂ ಸಭಾಕಾರ್ಯಕ್ರಮ**

**ಶ್ರೀ ಕೆ. ಶಶಿಕಿರಣ್ ಶೆಟ್ಟಿ**
ಅಡ್ವೊಕೇಟ್ ಜನರಲ್ ಆಫ್ ಕರ್ನಾಟಕ

ಅಧ್ಯಕ್ಷತೆ
**ಸಿಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು, ಬಂಟರ ಸಂಘ ಬೆಂಗಳೂರು

**ಸಂಘದ ಸದಸ್ಯರಿಗಾಗಿ ನೂತನವಾಗಿ ಪರಿಚಯಿಸುತ್ತಿರುವ ಮೊಬೈಲ್ ಆ್ಯಪ್ ಅನಾವರಣ**

**ಮಧ್ಯಾಹ್ನ 2.30ರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಶಾಲಾ ಮಕ್ಕಳಿಂದ**

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಅಶೋಕ್ ಕುಮಾರ್ ಶೆಟ್ಟಿ ಹೆಚ್.**
ಖಜಾಂಚಿ

**ಪ್ರದೀಪ್‌ರಾಜ್ ಶೆಟ್ಟಿ, ಮಂದಾರ್ತಿ**
ಸಂಚಾಲಕರು, ಯೋಜನಾ ಸಮಿತಿ

**ಕೆ. ಪ್ರಕಾಶ್ ಶೆಟ್ಟಿ**
ಚೇರ್‌ಮೆನ್, ಯೋಜನಾ ಸಮಿತಿ

ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಯೋಜನಾ ಸಮಿತಿ ಸದಸ್ಯರು ಮತ್ತು
ಸರ್ವ ಸದಸ್ಯರು ಬಂಟರ ಸಂಘ ಬೆಂಗಳೂರು
ಆಡಳಿತ ಮಂಡಳಿ ಸದಸ್ಯರು, ಪ್ರಾಂಶುಪಾಲರು, ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿ ವೃಂದ
ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ - II

# ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ-II ಉದ್ಘಾಟನೆಗೊಳ್ಳಲಿರುವ ವಿದ್ಯಾರ್ಥಿನಿ ನಿಲಯ ಮತ್ತು ಭೋಜನ ಶಾಲಾ ಕಟ್ಟಡಗಳು



ವಿದ್ಯಾರ್ಥಿನಿ ನಿಲಯ ಮತ್ತು ಭೋಜನ ಶಾಲೆಯ ಹೊರನೋಟ





ವಿದ್ಯಾರ್ಥಿನಿ ನಿಲಯದ ಒಳಾಂಗಣ



ಭೋಜನ ಶಾಲೆ ಒಳಾಂಗಣ



ಅಡುಗೆ ಮನೆ

# ಬಂಟರ ಸಂಘ ಬೆಂಗಳೂರು
# ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿ 2024–26

ಬೆಂಗಳೂರು ಬಂಟರ ಸಂಘ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಆರ್ಥಿಕ ಸಹಾಯವನ್ನು ಹಲವು ವರ್ಷಗಳಿಂದ ನೀಡುತ್ತಾ ಬಂದಿದೆ. ಆರ್ಥಿಕವಾಗಿ ಸಂಕಷ್ಟದಲ್ಲಿರುವ ಅನೇಕ ವಿದ್ಯಾರ್ಥಿಗಳು ಈ ಯೋಜನೆಯ ಸದುಪಯೋಗವನ್ನು ಪಡೆದು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಯಶಸ್ಸು ಗಳಿಸಿ ಔದ್ಯೋಗಿಕವಾಗಿ ಮುನ್ನಡೆಯುತ್ತಿರುವುದು ಸಂಘಕ್ಕೆ ಸಾರ್ಥಕತೆಯನ್ನು ತಂದಿದೆ. ಸಂಘದ ಸಹಾಯಧನ ಹಾಗೂ ತಮ್ಮ ಶ್ರಮದಿಂದ ಔದ್ಯೋಗಿಕವಾಗಿ ಹಾಗೂ ಆರ್ಥಿಕವಾಗಿ ಸಬಲರಾಗಿರುವ ತಾವು, ಹಣವನ್ನು ಸಂಘಕ್ಕೆ ನೀಡುವುದರ ಮೂಲಕ ಸಮಾಜದ ಇನ್ನಷ್ಟು ವಿದ್ಯಾರ್ಥಿಗಳಿಗೆ ಸಹಾಯವಾಗುವಂತೆ ಮಾಡಿದ್ದೀರಿ.

**ಎಪ್ರಿಲ್ 30, 2026ರವರೆಗೆ ರೂ. 17,55,599/– (ಹದಿನೇಳು ಲಕ್ಷದ ಐವತ್ತೈದು ಸಾವಿರದ ಐನೂರ ತೊಂಭತ್ತ ಒಂಭತ್ತು ರೂಪಾಯಿ) ಮೊತ್ತವನ್ನು ಸಂಗ್ರಹಿಸಲಾಗಿದ್ದು, ನೀಡಿದವರ ವಿವರಗಳು ಈ ಕೆಳಗಿನಂತಿವೆ;**

| | | | |
|---|---|---|---|
| ನಿವೇದಿತಾ ರೈ ಹೆಚ್. | ಪೂಜಾ ಶೆಟ್ಟಿ | ಶಹರಿ ಶೆಟ್ಟಿ | ಪಿ. ಪ್ರಖ್ಯಾತ್ ಶೆಟ್ಟಿ |
| ನಿತೇಶ್ ಶೆಟ್ಟಿ | ಪವಿತ್ರ ಶೆಟ್ಟಿ | ರೂಪೇಶ್ | ಸುಬ್ರಹ್ಮಣ್ಯ ಆರ್. |
| ಪ್ರತಾಪ್ ಶೆಟ್ಟಿ | ಸಂದೇಶ್ ಶೆಟ್ಟಿ | ಸುದರ್ಶನ್ ಶೆಟ್ಟಿ | ಅರುಣ್ ಶೆಟ್ಟಿ |
| ಅನುಷಾ ಶೆಟ್ಟಿ | ಪಿ. ಪ್ರಖ್ಯಾತ್ ಶೆಟ್ಟಿ | ಪೂಜಾ ಶೆಟ್ಟಿ | ಡಾ. ಪ್ರವೀಣ್ ಶೆಟ್ಟಿ |
| ಸಂದೀಪ್ ಶೆಟ್ಟಿ | ಸುಪ್ರಿಯಾ ಸಿ. ಶೆಟ್ಟಿ | ರಜತ್ ಶೆಟ್ಟಿ | ಐಶ್ವರ್ಯ ಶೆಟ್ಟಿ |
| ದರ್ಶನ್ ಶೆಟ್ಟಿ | ಆದರ್ಶ್ ಶೆಟ್ಟಿ | ಅಸ್ಮಿತಾ ಶೆಟ್ಟಿ | ಮಹೇಶ್ ಶೆಟ್ಟಿ |
| ಶ್ರಾವ್ಯ ಶೆಟ್ಟಿ | ಆಕಾಶ್ ಶೆಟ್ಟಿ | ಚೈತನ್ಯ ಶೆಟ್ಟಿ | ಅಕ್ಷಯ್ ಎಸ್. ಶೆಟ್ಟಿ |
| ಸ್ಫೂರ್ತಿ ಶೆಟ್ಟಿ | ಮೇಘನಾ ಜೆ. ಶೆಟ್ಟಿ | ಡಾ. ಪ್ರದೀಪ್ ಶೆಟ್ಟಿ | ದಿಶಾ ಬಿ. |
| ವಿನೋದ ಶೆಟ್ಟಿ | ಶಬರೀಶ ಶೆಟ್ಟಿ | ಶ್ರೀನಿಧಿ ಪಿ. ಶೆಟ್ಟಿ | ರಂಜಿತ್ ಶೆಟ್ಟಿ ಎನ್.ಜಿ. |
| ನಂದೀಶ ಶೆಟ್ಟಿ | ಚರಣ್‌ರಾಜ್ ಶೆಟ್ಟಿ | | |

ನಮ್ಮ ಸಂಘದ ವಿದ್ಯಾ ನಿಧಿಗೆ ಧನ ಸಹಾಯ ಮಾಡುವವರು ಸಂಘದ ಕಛೇರಿಯನ್ನು ಸಂಪರ್ಕಿಸಲು ಕೋರಲಾಗಿದೆ. (080–23399323/23399636 / 7022119739)

ಸಂಘದ ಅಧಿದೇವತೆ ಶ್ರೀ ವರಸಿದ್ಧಿ ವಿನಾಯಕನು ತಮಗೆ ಹಾಗೂ ತಮ್ಮ ಕುಟುಂಬಕ್ಕೆ ಆಯುರಾರೋಗ್ಯ ಭಾಗ್ಯವನ್ನು ನೀಡಿ ಇನ್ನಷ್ಟು ನಮ್ಮ ಸಮಾಜದ ವಿದ್ಯಾರ್ಥಿಗಳಿಗೆ ವಿದ್ಯಾನಿಧಿ ನೀಡುವ ಶಕ್ತಿಯನ್ನು ನೀಡಲೆಂದು ಪ್ರಾರ್ಥಿಸುತ್ತಿದ್ದೇವೆ.

**ಸುಧಾಕರ ಶೆಟ್ಟಿ ಹಟ್ಟಿಯಂಗಡಿ**
ಸಂಚಾಲಕರು,
ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ
**ಮೊ: 94490 89993**

**ಉಮೇಶ್ ಕುಮಾರ್ ಶೆಟ್ಟಿ**
ಚೇರ್‌ಪರ್ಸನ್,
ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ
**ಮೊ: 97412 20559**

# ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ–II ಪ್ರಥಮ ಪಿಯುಸಿ ವಿದ್ಯಾರ್ಥಿಗಳ ಓರಿಯೆಂಟೇಷನ್ ಕಾರ್ಯಕ್ರಮ

ಬಂಟರ ಸಂಘ ಆರ್.ಎನ್.ಎಸ್. ಪದವಿ ಪೂರ್ವ ಕಾಲೇಜು ಯಲಚಗುಪ್ಪೆ ಆವರಣದಲ್ಲಿ ದಿನಾಂಕ 01.06.2026, ಸೋಮವಾರದಂದು ಪ್ರಥಮ ವರ್ಷದ ವಿದ್ಯಾರ್ಥಿಗಳ ಶೈಕ್ಷಣಿಕ ಕಾರ್ಯಾಗಾರದ ಆರಂಭೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಬೆಂಗಳೂರು ಮಾನಸಿಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಡಾ. ರಜನಿ ಪಿ.ರವರು ಆಗಮಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬಂಟರ ಸಂಘದ ಆಡಳಿತ ಮಂಡಳಿಯ ಅಧ್ಯಕ್ಷರಾದ ಸಿಎ. ಅಶೋಕ್ ಶೆಟ್ಟಿ ಎಂ. ರವರು ವಹಿಸಿದ್ದರು. ವೇದಿಕೆಯಲ್ಲಿ ಬಂಟರ ಸಂಘದ ಕಾರ್ಯದರ್ಶಿಯವರಾದ ಶ್ರೀ ವಿಜ0ಯ್ ಜೆ. ಶೆಟ್ಟಿ ಹಾಲಾಡಿ, ಜೊತೆ ಕಾರ್ಯದರ್ಶಿ ಶ್ರೀಮತಿ ಜಯಶ್ರೀ ಸಿ. ರೈ, ಖಜಾಂಚಿ ಶ್ರೀ ಅಶೋಕ್ ಕುಮಾರ್ ಶೆಟ್ಟಿ ಹೆಚ್. ಹಾಗೂ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಲಿಲ್ ಅರಸಿಯವರು ಉಪಸ್ಥಿತರಿದ್ದರು.





ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮುಖ್ಯ ಅತಿಥಿಗಳಾದ ಡಾ. ರಜನಿ ಪಿ.ರವರು ವಿದ್ಯಾರ್ಥಿಗಳಿಗೆ ಮಾನಸಿಕ ಆರೋಗ್ಯದ ಮಹತ್ವವನ್ನು ಮನೋಜ್ಞವಾಗಿ ವಿವರಿಸಿದರು. ಜೀವನದಲ್ಲಿ ಮಾನಸಿಕ ಆರೋಗ್ಯದ ಪಾತ್ರ ಹಾಗೂ ವಿದ್ಯಾರ್ಥಿ ಜೀವನದಲ್ಲಿ ಅದನ್ನು ಕಾಪಾಡಿಕೊಳ್ಳುವ ಅಗತ್ಯತೆಯ ಕುರಿತು ಮೌಲ್ಯಯುತ ಮಾಹಿತಿಯನ್ನು ನೀಡಿದರು.




ಬೆಂಗಳೂರು ಬಂಟರ ಸಂಘದ ಗೌರವ ಕಾರ್ಯದರ್ಶಿಯವರಾದ ಶ್ರೀ ವಿಜ0ಯ್ ಜೆ. ಶೆಟ್ಟಿ ಹಾಲಾಡಿಯವರು ಮಾತನಾಡಿ, ಬಂಟರ ಸಂಘವು ಆರಂಭಿಸಿರುವ "ಸಂಕಲ್ಪ" ಯೋಜನೆಯಿಂದ ವಿದ್ಯಾರ್ಥಿಗಳು ಪಡೆಯುತ್ತಿರುವ ಪ್ರಯೋಜನಗಳನ್ನು ವಿವರಿಸಿದರು. ಜೊತೆಗೆ ಸಂಘದ ವಿವಿಧ ಸಾಮಾಜಿಕ ಸೇವಾ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು.

ಅಧ್ಯಕ್ಷೀಯ ಭಾಷಣ ಮಾಡಿದ ಸಿಎ. ಅಶೋಕ್ ಶೆಟ್ಟಿ ಎಂ.ರವರು ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯಲ್ಲಿ ಜೀವನ ಮೌಲ್ಯಗಳ ಮಹತ್ವವನ್ನು ವಿವರಿಸಿದರು. ಖಜಾಂಚಿಗಳಾದ ಶ್ರೀ ಅಶೋಕ್ ಕುಮಾರ್ ಶೆಟ್ಟಿ ಹೆಚ್.ರವರು "ಸಂಕಲ್ಪ" ಯೋಜನೆಯು ವಿದ್ಯಾರ್ಥಿಗಳ

ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾಗಿರುವುದನ್ನು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಎಲಿಲ್ ಅರಸಿಯವರು ಸಭೆಯನ್ನು ಉದ್ದೇಶಿಸಿ ಮಾತನಾಡಿ, ವಿದ್ಯಾರ್ಥಿಗಳನ್ನು ಹಾಗೂ ಪೋಷಕರನ್ನು ಸ್ವಾಗತಿಸಿದರು. ಅಲ್ಲದೆ ಕಾಲೇಜಿನ ಮಾರ್ಗಸೂಚಿಗಳು, ನಿಯಮಗಳು ಹಾಗೂ ಶೈಕ್ಷಣಿಕ ಚಟುವಟಿಕೆಗಳ ಕುರಿತು ವಿವರವಾದ ಮಾಹಿತಿ ನೀಡಿದರು.

ಬಂಟರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರುಗಳು “ಸಂಕಲ್ಪ” ಯೋಜನೆಗಾಗಿ ವಿವಿಧ ಜಿಲ್ಲೆಗಳು ಹಾಗೂ ಊರುಗಳಿಂದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆಯ ಕುರಿತು ವಿವರಿಸಿದರು.

ಗಣಿತಶಾಸ್ತ್ರ ಉಪನ್ಯಾಸಕರಾದ ಶ್ರೀ ನಾಗರಾಜಪ್ಪ ಹಾಗೂ ರಸಾಯನಶಾಸ್ತ್ರ ಉಪನ್ಯಾಸಕರಾದ ಶ್ರೀ ಮಹೇಶ್‌ರವರು ಕಾಲೇಜಿನಲ್ಲಿ ನಡೆಯುವ ಸಿಇಟಿ ತರಬೇತಿ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು. ವಾಣಿಜ್ಯಶಾಸ್ತ್ರ ಉಪನ್ಯಾಸಕರಾದ ಶ್ರೀ ರಘು.ರವರು ಸಿಎ ತರಬೇತಿ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು. ಕಾರ್ಯಕ್ರಮದಲ್ಲಿ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ವಿಶೇಷವಾಗಿ ವಾಣಿಜ್ಯ ವಿಭಾಗದಲ್ಲಿ ಕಾಲೇಜಿಗೆ ಪ್ರಥಮ ಸ್ಥಾನ ಗಳಿಸಿದ ಕುಮಾರಿ ಸಿಂಚನಾ ಜಿ.ಆರ್. ಅವರನ್ನು ರೂ.25,000/–ನಗದು ಬಹುಮಾನದೊಂದಿಗೆ ಸನ್ಮಾನಿಸಿ ಅಭಿನಂದಿಸಲಾಯಿತು.

ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಸುಮಾರು 120 ವಿದ್ಯಾರ್ಥಿಗಳು ಬಂಟರ ಸಂಘದ ಉಚಿತ ಶಿಕ್ಷಣ ಯೋಜನೆಯಾದ “ಸಂಕಲ್ಪ”ದ ಫಲಾನುಭವಿಗಳಾಗಿದ್ದಾರೆ.



ಕಾರ್ಯಕ್ರಮದ ಆರಂಭದಲ್ಲಿ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಪ್ರಾರ್ಥನಾ ಗೀತೆಯನ್ನು ಹಾಡಿದರು. ಪ್ರಾಂಶುಪಾಲರು ಗಣ್ಯರನ್ನು ಸಭೆಗೆ ಸ್ವಾಗತಿಸಿದರು. ಅರ್ಥಶಾಸ್ತ್ರ ಉಪನ್ಯಾಸಕಿಯಾದ ಶ್ರೀಮತಿ ಹೇಮಾವತಿ ಎಂ.ಎಸ್.ರವರು ಕಾರ್ಯಕ್ರಮವನ್ನು ನಿರೂಪಿಸಿದರು. ಸುಮಾರು 800ಕ್ಕೂ ಅಧಿಕ ವಿದ್ಯಾರ್ಥಿಗಳು, ಪೋಷಕರು ಹಾಗೂ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮವು ಯಶಸ್ವಿಯಾಗಿ ಮುಕ್ತಾಯಗೊಂಡಿತು.

---

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

## Coming Soon! The Bunts Sangha Mobile App
## Making community connections easier, faster and smarter.

We are delighted to launch the Bunts Sangha Mobile App soon, bringing our community closer with easy access to information, events, and updates.

Designed exclusively for our members, the Bunts Sangha Mobile App will make staying connected with our community easier than ever. Members can update their contact information, address and profile photo, access program details, watch live events, receive obituary updates, upload community activities and read digital copies of Snehachinthane, along with many other useful features.

The Bunts Sangha Mobile App is a significant step towards strengthening communication, enhancing member engagement, and bringing our community closer together in the digital era.

With best regards,

**Vijay J Shetty Halady**
**Hon. Secretary**

# ಬಂಟರ ಸಂಘ ಬೆಂಗಳೂರು
# ವಿವಾಹ ವೇದಿಕೆ ಸಮಿತಿ–ಸೇವಾ ಸಮಾಗಮ–2026

ವಿವಾಹ ವೇದಿಕೆ ಸಮಿತಿಯ ವತಿಯಿಂದ ದಿನಾಂಕ 28.05.2026ರಂದು ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 3.00ರವರೆಗೆ ಹಮ್ಮಿಕೊಳ್ಳಲಾಗಿದ್ದ ವಧು–ವರರ ಬೃಹತ್ ಸಮಾವೇಶ ಮತ್ತು ಮುಖಾಮುಖಿ ಪರಿಚಯ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಜರುಗಿತು. ಸಮಾಜದ ಬಂಟ ಯುವಕ–ಯುವತಿಯರಿಗೆ ಯೋಗ್ಯ ಬಂಟ ಜೀವನ ಸಂಗಾತಿ ಆಯ್ಕೆ ಮಾಡಿಕೊಳ್ಳಲು ಸೂಕ್ತ ವೇದಿಕೆ ಕಲ್ಪಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



ಆರಂಭದಲ್ಲಿ ಶ್ರೀ ವರಸಿದ್ಧಿ ವಿನಾಯಕನ ಪೂಜೆಯ ನಂತರ ಕಾರ್ಯಕ್ರಮದ ಶುಭಾರಂಭವನ್ನು ಸಮಿತಿಯ ಸಂಘದ ಅಧ್ಯಕ್ಷರಾದ ಸಿ.ಎ. ಅಶೋಕ್ ಶೆಟ್ಟಿ ಎಂ. ಮತ್ತು ಶ್ರೀಮತಿ ವಿಭಾ ಶೆಟ್ಟಿ ದಂಪತಿಗಳು, ಗೌರವ ಕಾರ್ಯದರ್ಶಿಗಳಾದ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ, ಎಲ್ಲಾ ಕಾರ್ಯಕಾರಿ ಸಮಿತಿ ಸದಸ್ಯರು, ವಿವಾಹ ವೇದಿಕೆ ಸಮಿತಿ ಸದಸ್ಯರು ಹಾಗೂ ಸಮಾಜದ ಹಿರಿಯ ಮುಖಂಡರು ಒಡಗೂಡಿ ಸೇವಾ ಸಮಾಗಮ–2026 ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವುದರ ಮೂಲಕ ನೆರವೇರಿಸಿದರು.





ಉದ್ಘಾಟನೆ ನೆರವೇರಿಸಿ ಮಾತನಾಡಿದ ಅಧ್ಯಕ್ಷರು, "ಇಂದಿನ ಆಧುನಿಕ ಯುಗದಲ್ಲಿ ಬಿಡುವಿಲ್ಲದ ಜೀವನಶೈಲಿಯಿಂದಾಗಿ ಸೂಕ್ತ ವಧು–ವರರ ಹುಡುಕಾಟ ಕಷ್ಟಕರವಾಗಿದೆ. ಇಂತಹ ಸಮಾವೇಶಗಳು ಪೋಷಕರ ಸಮಯ ಮತ್ತು ಶ್ರಮವನ್ನು ಉಳಿಸಲು ಸಹಕಾರಿಯಾಗಿವೆ" ಎಂದು ಆಶಯ ನುಡಿದರು.

ಬೆಳಿಗ್ಗೆಯಿಂದಲೇ ವಿವಿಧ ಭಾಗಗಳಿಂದ ಪೋಷಕರು ತಮ್ಮ ಮಕ್ಕಳ ವಿವಾಹದ ಪ್ರೊಫೈಲ್ ಹಾಗೂ ಜಾತಕಗಳೊಂದಿಗೆ ಆಗಮಿಸಿದ್ದರು. ಪರಸ್ಪರ ಇಷ್ಟವಾದ ವಧು–ವರರ ಪೋಷಕರು ಸ್ಥಳದಲ್ಲಿಯೇ ಕುಳಿತು ಮುಕ್ತವಾಗಿ ಮಾತುಕತೆ ನಡೆಸಲು ಸಮಿತಿಯು ಪ್ರತ್ಯೇಕ ಕೌಂಟರ್ ಹಾಗೂ ಸಮಾಲೋಚನಾ ಕೊಠಡಿಗಳ ವ್ಯವಸ್ಥೆ ಕಲ್ಪಿಸಿತ್ತು. ಇಂಜಿನಿಯರಿಂಗ್, ವೈದ್ಯಕೀಯ, ಸ್ನಾತಕೋತ್ತರ ಪದವಿ, ಖಾಸಗಿ ವಲಯದಲ್ಲಿ ಉದ್ಯೋಗದಲ್ಲಿರುವ ಐಟಿ/ಬಿಟಿ ವೃತ್ತಿಪರ ಪ್ರೊಫೈಲ್‌ಗಳು ಹೆಚ್ಚಿನ ಸಂಖ್ಯೆಯಲ್ಲಿದ್ದವು. ನಂತರ ವಧು–ವರರ ನೇರ ಪರಿಚಯ ಕಾರ್ಯಕ್ರಮ ನಡೆಯಿತು. ಪೋಷಕರು ಪರಸ್ಪರ ಕುಳಿತು ಮಾತನಾಡಲು, ಜಾತಕ ಪರಿಶೀಲಿಸಲು ಮತ್ತು ಆಲೋಚನೆಗಳನ್ನು ವಿನಿಮಯ ಮಾಡಿಕೊಳ್ಳಲು ಪ್ರತ್ಯೇಕ ಆಸನಗಳ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ಈಗಾಗಲೇ ನೊಂದಣಿಯಾಗಿದ್ದ, ನೇರವಾಗಿ ಬಿತ್ತರಿಸಲು ಅನುಮತಿಸಿದ ಪ್ರೊಫೈಲ್‌ಗಳನ್ನು ಎಲ್.ಇ.ಡಿ ಯಲ್ಲಿ ಪ್ರದರ್ಶಿಸಲಾಯಿತು. ಕಾರ್ಯಕ್ರಮದ ಮಧ್ಯದಲ್ಲಿ ಸಂಘದ ಸದಸ್ಯರಾದ ಶ್ರೀಮತಿ ಪ್ರಮಿತ ಶೆಟ್ಟಿ ಮತ್ತು ಸಂಗಡಿಗರಿಂದ ಗಣೇಶ ವಂದನೆ, ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ–2 ಶಾಲೆಯ ವಿದ್ಯಾರ್ಥಿಗಳಿಂದ "ಗೀತಾ ಗಾಯನ" ಎಲ್ಲರ ಮೆಚ್ಚುಗೆ ಗಳಿಸಿತು. ಇಂದಿನ ದಿನಗಳಲ್ಲಿ ವೈವಾಹಿಕ ಜೀವನದಲ್ಲಿ ಹೊಂದಾಣಿಕೆಯ ಮಹತ್ವ, ಸರಳ ವಿವಾಹದ ಆಚರಣೆ ಹಾಗೂ ವರದಕ್ಷಿಣೆ ಮುಂತಾದ ಸಮಾಜಿಕ ಪಿಡುಗುಗಳಿಂದ ದೂರವಿರುವಂತೆ ಯುವ ಪೀಳಿಗೆಗೆ ಮಾರ್ಗದರ್ಶನ ನೀಡಲಾಗುತ್ತಿತ್ತು. ಸಮಾವೇಶದಲ್ಲಿ ಭಾಗವಹಿಸಿದ್ದ ಕುಟುಂಬ ಬಾಂಧವರು ಪ್ರಾಥಮಿಕ ಹಂತದ ಮಾತುಕತೆ ನಡೆಸಿ, ಸಕಾರಾತ್ಮಕವಾಗಿ ಸ್ಪಂದಿಸಿದರು. ಸಮಾವೇಶಕ್ಕೆ ದೂರದ ಊರುಗಳಿಂದ ಆಗಮಿಸಿದ್ದ ವಧು–ವರರು, ಪೋಷಕರು ಹಾಗೂ ಸಾರ್ವಜನಿಕರಿಗಾಗಿ ಸಮಿತಿಯ ವತಿಯಿಂದ ಅತ್ಯಂತ ಅಚ್ಚುಕಟ್ಟಾದ ಮಧ್ಯಾಹ್ನದ ಶುಚಿ–ರುಚಿಯಾದ ಭೋಜನದ ವ್ಯವಸ್ಥೆಯನ್ನು ಮಾಡಲಾಗಿತ್ತು.



ಕಾರ್ಯಕ್ರಮದ ಆರಂಭದಿಂದ ಮುಕ್ತಾಯದವರೆಗೆ ನಮ್ಮೊಂದಿಗೆ ಕಾರ್ಯಕ್ರಮದಲ್ಲಿ ಜಂಟಿಯಾಗಿ ಭಾಗಿಯಾದ ಸಮಾಜ ಸೇವಾ ಸಮಿತಿ ಹಾಗೂ ಸೇವಾದಳ ಸಮಿತಿಗೆ ವಿಶೇಷ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಮ್ಮೊಂದಿಗೆ ಸದಾ ಬೆನ್ನೆಲುಬಾಗಿ ನಿಂತು, ಹೆಗಲಿಗೆ ಹೆಗಲು ಕೊಟ್ಟು ಒಗ್ಗಟ್ಟಿನಿಂದ ಹಗಲಿರುಳು ಶ್ರಮಿಸಿದ ವಿವಾಹ ವೇದಿಕೆ ಸಮಿತಿಯ ಸಂಚಾಲಕರಾದ ಶ್ರೀಮತಿ ಸೇವಂತಿ ಶೆಟ್ಟಿಯವರಿಗೆ ಹಾಗೂ ಸಮಿತಿಯ ಎಲ್ಲಾ ಆತ್ಮೀಯ ಸದಸ್ಯರಿಗೆ ತುಂಬು ಹೃದಯದ ನಮನಗಳು. ತಮ್ಮ ಅಮೂಲ್ಯವಾದ ಅನುಭವ, ಮಾರ್ಗದರ್ಶನ ಮತ್ತು ಸೂಕ್ತ ಸಲಹೆಗಳ ಮೂಲಕ ಈ ಕಾರ್ಯಕ್ರಮದ ಯಶಸ್ಸಿಗೆ ಕಾರಣರಾದ ಎಲ್ಲಾ ಸಲಹೆಗಾರರಿಗೂ ಕೃತಜ್ಞತೆಗಳು. ಈ ಕಾರ್ಯಕ್ರಮದ ಪ್ರತಿಯೊಂದು ಹಂತದಲ್ಲೂ ತಮ್ಮ ಸಹಮತದ ಒಪ್ಪಿಗೆಯನ್ನು ನೀಡಿ, ಸಂಪೂರ್ಣ ಬೆಂಬಲವಾಗಿ ನಿಂತು ಪ್ರೋತ್ಸಾಹಿಸಿದ ಸಂಘದ ಎಲ್ಲಾ ಗೌರವಾನ್ವಿತ ಪದಾಧಿಕಾರಿಗಳಿಗೂ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರಿಗೂ, ದಾನಿಗಳಿಗೂ ತುಂಬು ಹೃದಯದ ಧನ್ಯವಾದಗಳು. ನಿಮ್ಮ ಒಮ್ಮತದ ಒಪ್ಪಿಗೆ ಮತ್ತು ಸಹಕಾರವೇ ಈ ಕಾರ್ಯಕ್ರಮದ ಯಶಸ್ಸಿಗೆ ಮುಖ್ಯ ಅಡಿಪಾಯ.

"ವಧು-ವರರ ಸಮಾವೇಶಗಳು ಕೇವಲ ಒಂದು ದಿನದ ಕಾರ್ಯಕ್ರಮವಾಗದೆ, ಸಮಾಜಕ್ಕೆ ನಿರಂತರವಾಗಿ ನೆರವಾಗುವ ನಿಟ್ಟಿನಲ್ಲಿ ಸದಾ ನಡೆಯುತ್ತಿರಬೇಕು. ಸಂಘದ ಇಂತಹ ಸಾಮಾಜಿಕ ಕಾರ್ಯಗಳು ಯಾವುದೇ ಕಾರಣಕ್ಕೂ ನಿಲ್ಲಬಾರದು ಮತ್ತು ಸಾರ್ವಜನಿಕರ ಸೇವೆಯಲ್ಲಿ ನಮ್ಮ ಸಂಘ ಎಂದಿಗೂ ಮುಂಚೂಣಿಯಲ್ಲಿರುತ್ತದೆ" ಎಂದು ಸಮಿತಿಯು ದೃಢ ಸಂಕಲ್ಪ ಕೈಗೊಂಡಿತು. 'ಸದಾ ಸೇವೆಯಲ್ಲಿ ಸಂಘ' ಎಂಬ ಉದಾತ್ತ ಧ್ಯೇಯದೊಂದಿಗೆ ಮುಂದಿನ ದಿನಗಳಲ್ಲೂ ಇಂತಹ ಹತ್ತು ಹಲವು ಜನಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

**ಸೇವಂತಿ ಶೆಟ್ಟಿ**
ಸಂಚಾಲಕರು,
ವಿವಾಹ ವೇದಿಕೆ ಸಮಿತಿ

**ಗೀತಾ ಶೆಟ್ಟಿ**
ಚೇರ್‌ಪರ್ಸನ್,
ವಿವಾಹ ವೇದಿಕೆ ಸಮಿತಿ



## Congratulations!

Dr. Aishwarya Hegde, D/o Jagadeesh Hegde and Babitha Rai N. has secured 8th Rank in MD (Pharmacology) from Rajiv Gandhi University of Health Sciences for the year 2026. Bunts Sangha Bangalore congratulates and wishes her all the best.

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

324, ಕಾರ್ಡ್ ರಸ್ತೆ, ವಿಜಯನಗರ, ಬೆಂಗಳೂರು–560040.
ಫೋನ್: 080–23399323 / 23399636
Email: buntsanghabangalore@yahoo.in

## ಆಡಳಿತ ಮಂಡಳಿಯ ಆಯ್ಕೆ ಚುನಾವಣೆ – 2026–29

**ಗೌರವಾನ್ವಿತ ಸದಸ್ಯರೇ,**

ಸಂಘದ ನೂತನ ಆಡಳಿತ ಮಂಡಳಿಯ ಆಯ್ಕೆ ಚುನಾವಣೆಯು ದಿನಾಂಕ 16.08.2026ರಂದು ಬೆಳಿಗ್ಗೆ 9.00 ಘಂಟೆಯಿಂದ ಸಂಜೆ 5.00 ಘಂಟೆಯವರೆಗೆ ನಡೆಯಲಿದೆ. ಈ ಚುನಾವಣೆಯ ಮತದಾನವು ಬಂಟರ ಸಂಘದ ಆವರಣ ಹಾಗೂ ಮುಲ್ಕಿ ಸುಂದರರಾಮ್ ಶೆಟ್ಟಿ ಸ್ಮಾರಕ ಎಮ್.ಎಸ್.ಆರ್.ಎಸ್. ನಗರ ಟ್ರಸ್ಟ್ ನಂ. 114/2, 9ನೇ ಮೈನ್, 7ನೇ ಕ್ರಾಸ್, ಮುಖ್ಯ ಉದ್ಯಾನವನದ ಹತ್ತಿರ, ಮುಲ್ಕಿ ಸುಂದರರಾಮ್ ಶೆಟ್ಟಿ ನಗರ, ಬಿಳೇಕಹಳ್ಳಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560076 ಇಲ್ಲಿ ಏಕಕಾಲದಲ್ಲಿ ನಡೆಯಲಿದೆ.

ನಮ್ಮ ದಾಖಲೆಗಳ ಪ್ರಕಾರ ಈ ಕೆಳಗಿನ ಪಿನ್‌ಕೋಡ್ ವ್ಯಾಪ್ತಿಯಲ್ಲಿ ಬರುವ ಸದಸ್ಯರು ಎಂ.ಎಸ್.ಆರ್.ಎಸ್. ನಗರದ ಮತಗಟ್ಟೆಯಲ್ಲಿ ಮಾತ್ರ ಮತದಾನ ಮಾಡಲು ಅರ್ಹರಾಗಿರುತ್ತಾರೆ.

560011, 560029, 560034, 560041, 560068, 560069, 560076, 560078, 560083, 560095, 560099, 560100, 560102, 560105, 562106, 562107, 560108, 560109, 560114.

ದಿನಾಂಕ 31.03.2025ರವರೆಗೆ ನೋಂದಾಯಿಸಲ್ಪಟ್ಟ ಸದಸ್ಯರು **(ಸದಸ್ಯತ್ವ ಸಂಖ್ಯೆ : ಪಿ.ಎಲ್.018856ರವರೆಗೆ)** ಮತದಾನದಲ್ಲಿ ಭಾಗವಹಿಸಲು ಅರ್ಹರಾಗಿದ್ದಾರೆ. ಸದಸ್ಯರು ತಮ್ಮ ಹೆಸರನ್ನು ಕಛೇರಿಯಲ್ಲಿ ತಮ್ಮ ಮತದಾರರ ಪಟ್ಟಿಯಲ್ಲಿ ಪರೀಕ್ಷಿಸಲು ಕೋರಲಾಗಿದೆ. ಸದಸ್ಯರಾಗಿದ್ದು ಅವರ ಹೆಸರು ಪಟ್ಟಿಯಲ್ಲಿ ಇಲ್ಲದಿದ್ದಲ್ಲಿ ಕೂಡಲೇ ದಾಖಲೆಗಳೊಂದಿಗೆ ಸಂಘದ ಕಛೇರಿಯನ್ನು ಸಂಪರ್ಕಿಸಲು ಕೋರಲಾಗಿದೆ.

ಮತದಾನಕ್ಕೆ ಸದಸ್ಯರ ಗುರುತು ಪತ್ರ (Membership ID Card)ವನ್ನು ತಪ್ಪದೇ ತರಬೇಕಾಗಿ ವಿನಂತಿ. ಈ ತನಕವೂ ತಮ್ಮ ಗುರುತಿನ ಚೀಟಿ ಪಡೆಯದ ಸದಸ್ಯ ಬಾಂಧವರು ಸಂಘದ ಕಛೇರಿಯನ್ನು ಸಂಪರ್ಕಿಸಿ ಕೂಡಲೇ ತಮ್ಮ ID card ಗಳನ್ನು ಪಡೆದುಕೊಳ್ಳುವಂತೆ ಈ ಮೂಲಕ ವಿನಂತಿಸುತ್ತಿದ್ದೇವೆ.

ಸದಸ್ಯತ್ವದ ಗುರುತಿನ ಚೀಟಿ ಕಳೆದುಕೊಂಡಿದ್ದಲ್ಲಿ ತಮ್ಮ ಹೆಸರು ಮತ್ತು ಸದಸ್ಯತ್ವದ ಸಂಖ್ಯೆಯೊಂದಿಗೆ ದಿನಾಂಕ 15.07.2026ರ ಒಳಗಾಗಿ ಸಂಘದ ಕಛೇರಿಯನ್ನು ಸಂಪರ್ಕಿಸಿದಲ್ಲಿ ಹೊಸ ಗುರುತಿನ ಚೀಟಿ ಸಿದ್ಧಪಡಿಸಿ ನೀಡಲಾಗುವುದು.

ಸಹಿ/–

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

# ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ
# ವಿದ್ಯಾರ್ಥಿವೇತನ ಯೋಜನೆ – 'ವಿದ್ಯಾ ದೀವಿಗೆ'

ಬೆಂಗಳೂರಿನಲ್ಲಿ ನೆಲೆಸಿರುವ ಸಮುದಾಯದ ಆರ್ಥಿಕವಾಗಿ ಹಿಂದುಳಿದ (ಬಡತನ ರೇಖೆಗಿಂತ ಕೆಳಗಿರುವ) ಕುಟುಂಬದ ವಿದ್ಯಾರ್ಥಿಗಳ ನೆರವಿಗಾಗಿ ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿಯ ವತಿಯಿಂದ 'ವಿದ್ಯಾ ದೀವಿಗೆ' ವಿದ್ಯಾರ್ಥಿವೇತನ ಯೋಜನೆಯಡಿಯಲ್ಲಿ ಗರಿಷ್ಠ ರೂ.40,000/– ವಾರ್ಷಿಕ ಶಾಲಾ ಶುಲ್ಕವಿರುವ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ ಅರ್ಹ ಅಭ್ಯರ್ಥಿಗಳು ಸೂಕ್ತ ದಾಖಲೆಗಳೊಂದಿಗೆ ಸಂಘದ ಕಛೇರಿಯಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

**ಅರ್ಜಿ ಸಲ್ಲಿಸಲು ನಿಯಮ/ ಮಾನದಂಡಗಳು**

- ಬೆಂಗಳೂರಿನಲ್ಲಿ ತಮ್ಮ ಕುಟುಂಬದೊಂದಿಗೆ ವಾಸವಿದ್ದು, ಬೆಂಗಳೂರಿನ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿರುವ (ಸಂಘದ ಸದಸ್ಯರು ಹಾಗೂ ಸದಸ್ಯೇತರರು) ಅರ್ಜಿ ಸಲ್ಲಿಸಬಹುದಾಗಿದೆ.
- 1ನೇ ತರಗತಿಯಿಂದ 10ನೇ ತರಗತಿಯವರೆಗೆ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ಈ ಯೋಜನೆಗೆ ಅರ್ಹರು.
- ಶಾಲೆಯ ವಾರ್ಷಿಕ ಶುಲ್ಕ ರೂ.40,000/– ಕ್ಕೆ ಮೀರಿರಬಾರದು.
- ಸ್ವಂತ ಮನೆ ಹಾಗೂ ಸ್ವಂತ ಉದ್ದಿಮೆ ಹೊಂದಿರುವವರು ಈ ಯೋಜನೆಗೆ ಅರ್ಹರಾಗಿರುವುದಿಲ್ಲ.
- ಬೆಂಗಳೂರು ಬಂಟರ ಸಂಘದಿಂದ ಇನ್ನಾವುದೇ ಧನಸಹಾಯ/ ಸೌಲಭ್ಯ ಪಡೆದ ಅಭ್ಯರ್ಥಿಗಳು ಈ ಯೋಜನೆಗೆ ಅರ್ಹರಾಗಿರುವುದಿಲ್ಲ.
- ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
- ಆಯ್ಕೆಯ ವಿಚಾರದಲ್ಲಿ ಸಂಘದ ತೀರ್ಮಾನವೇ ಅಂತಿಮ.

**ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು**

- ಶುಲ್ಕ ಪಾವತಿಸಿದ ರಸೀತಿಯ ಮೂಲಪ್ರತಿ / ವಾರ್ಷಿಕ ಶುಲ್ಕದ ವಿವರದ ಧೃಡೀಕೃತ ಪ್ರತಿ.
- ವಿದ್ಯಾರ್ಥಿ ಹಾಗೂ ತಂದೆ/ತಾಯಿ/ ಪೋಷಕರ ವಿಳಾಸ ಧೃಢೀಕರಣದ ಪ್ರತಿ (ಆಧಾರ್ ಕಾರ್ಡ್).
- ಬೆಂಗಳೂರು ಬಂಟರ ಸಂಘದ ಸದಸ್ಯತ್ವದ ಗುರುತಿನ ಚೀಟಿಯ ಪ್ರತಿ (ಸದಸ್ಯರಾಗಿದ್ದಲ್ಲಿ).
- ಕಳೆದ ಶೈಕ್ಷಣಿಕ ಸಾಲಿನ ಅಂಕಪಟ್ಟಿಯ ಧೃಢೀಕೃತ ಪ್ರತಿ.
- ರೇಷನ್ ಕಾರ್ಡ್ ಪ್ರತಿ (ಬಿಪಿಎಲ್/ ಅಂತ್ಯೋದಯ).
- ಆದಾಯ ಪ್ರಮಾಣಪತ್ರ.
- ಬ್ಯಾಂಕ್ ಪಾಸ್ ಬುಕ್ ಪ್ರತಿ.

ಅರ್ಜಿ ಸಲ್ಲಿಸಲು ಇಚ್ಛಿಸುವ ವಿದ್ಯಾರ್ಥಿಗಳು ಸೂಕ್ತ ದಾಖಲೆಗಳೊಂದಿಗೆ ನಿಗದಿತ ಅರ್ಜಿ ನಮೂನೆಯನ್ನು ಭರ್ತಿಮಾಡಿ ಸಂಘದ ಕಛೇರಿಗೆ ದಿನಾಂಕ 31.08.2026ರ ಒಳಗಾಗಿ ಸಲ್ಲಿಸತಕ್ಕದ್ದು. ಕೊನೆಯ ದಿನಾಂಕದ ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

**ಸೂಚನೆ: ಹೆಚ್ಚಿನ ವಿವರಗಳಿಗೆ ಸಂಘದ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.**
**ದೂರವಾಣಿ: +91 9741220559 / +91 7022119739 / 080–23399636**
**ಇಮೈಲ್: info@buntsanghablr.com | Website: www.buntsanghablr.com**

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಗೌರವ ಕಾರ್ಯದರ್ಶಿ

**ಸಿಎ. ಅಶೋಕ್ ಶೆಟ್ಟಿ ಎಂ.**
ಅಧ್ಯಕ್ಷರು

**ಸುಧಾಕರ ಶೆಟ್ಟಿ ಹಟ್ಟಿಯಂಗಡಿ**
ಸಂಚಾಲಕರು,
ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ
**ಮೊ: 9449089993**

**ಉಮೇಶ್ ಕುಮಾರ್ ಶೆಟ್ಟಿ**
ಚೇರ್‌ಪರ್ಸನ್
ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ
**ಮೊ: 9741220559**

ಬಂಟರ ಸಂಘ ಬೆಂಗಳೂರು
BUNTS' SANGHA BANGALORE

To,
The Hon. Secretary
Bunt's Sangha Bangalore
Bangalore - 560 040

| Photo Father | Photo Mother | Photo Applicant |
|---|---|---|

Date:

# Application for Vidya Deevige Scholarship

| | |
|---|---|
| **1. Name of the Applicant** | |
| **2. Father Name** | |
| **3. Mother Name** | |
| **4. Address for Communication** | |
| Permanent Address | Present Address |
| | |

**5. Family Details**

| | Name | Mobile No. | Education | Annual Income |
|---|---|---|---|---|
| Father | | | | |
| Mother | | | | |

| | |
|---|---|
| **6. Source of Income** | |

**7. Student Education Details**

| **Class (Presently Studying)** | **Academic year** | **Marks obtained in the previous year/ Grade** | **Name& Address of the Institution** |
|---|---|---|---|
| | | | |

| **Fee Structure** | **Amount** | **Total Amount** |
|---|---|---|
| Tuition Fee | | |
| Other | | |

| | |
|---|---|
| **8**. Proficiency in Sports or Other curricular activities may be furnished with proof (minimum State level representation) | |
| **9.** Particulars of Scholarship already availed (If Yes, furnish details) | |
| **10.** Whether the Student is physically challenged (If Yes, furnish details) | |
| **11.** Compassionate grounds under which you are eligible for this scheme | |

**12. Applicant Bank Details**

| | |
|---|---|
| Account Holder Name | |
| Account Number | |
| Name of the Bank & Branch | |
| IFSC Code | |

**13. Reference Details**

| | 1. | 2. |
|---|---|---|
| Name: | | |
| Membership No.: | | |
| Mobile No.: | | |
| Signature | | |

## DECLARATION

**The particulars furnished above are true and correct. The Amount will be used only for the purpose of education.**

**Signature of Applicant** **Signature of parent/ Guardian**

## For Office Use Only

**RECOMMENDATION**

**We recommend to sanction an amount of Rs.…………….. To Kumari/ Master……........……..**

**Son/ Daughter of …………………………………………………….............................................**

**Chairperson, Scholarship & Awards Committee**

**Date:**

---

**Forwarded to EC for approval**

**Treasurer** **Hon. Secretary** **President**

**Note:**

- All the documents to be submitted in hard copy only.
- Sanction shall be at the sole discretion of the Bunts Sangha administration.
- Application not duly filled is liable to be summarily rejected.
- Applications should be received within 31st August 2026.
- Annual fee should not be more than 40,000/-
- Students studying at Bangalore – Rural &Urban District are eligible for this scheme..

## Check- List of Documents to be enclosed (to be filled by applicant)

| | Name of Documents | Remarks | |
|---|---|---|---|
| | | Yes | No |
| 1. | Copy of BPL/ Anthyodaya card. | | |
| 2. | Copy of Bunts Sangha Membership Card (If Member) | | |
| 3. | Annual Fee Estimation copy duly attested by Head of Institution | | |
| 4. | Copy of latest marks card duly attested by Head of Institution | | |
| 5. | Copy of Fee paid receipt duly attested by Head of Institution | | |
| 6. | Copy of Income Certificate (Not older than 5 year) | | |
| 7. | Copy of Aadhar Card( Student + Parent) | | |
| 8. | Copy of Passport size photo (Student + Parent) | | |
| 9. | Bank Passbook Copy (First page ) Compulsory. | | |
| 10. | Certificate of Physically challenged (If any) | | |

# ಬಂಟರ ಸಂಘ ಬೆಂಗಳೂರು – ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ ಯಕ್ಷಸಂಭ್ರಮ – ಶ್ರೀ ದೇವಿ ಮಹಾತ್ಮೆ ಯಕ್ಷಗಾನ




ಯಕ್ಷಗಾನ ಮತ್ತು ರಂಗತರಬೇತಿ ಸಮಿತಿಯ ವತಿಯಿಂದ ದಿನಾಂಕ 06.06.2026ರಂದು ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನದಲ್ಲಿ ಯಕ್ಷ ಸಂಭ್ರಮ–ಶ್ರೀ ದೇವಿ ಮಹಾತ್ಮೆ ಯಕ್ಷಗಾನವನ್ನು ಆಯೋಜಿಸಲಾಗಿತ್ತು. ಸಂಘದ ಹವ್ಯಾಸಿ ಸದಸ್ಯ ಕಲಾವಿದರು ವೃತ್ತಿಪರ ಯಕ್ಷಗಾನ ಕಲಾವಿದರಂತೆ ತಮ್ಮ ಕಲೆಯನ್ನು ಪ್ರದರ್ಶಿಸಿದರು. ಕಿಕ್ಕಿರಿದು ತುಂಬಿದ ಸಭಾಭವನದಲ್ಲಿ ಪ್ರದರ್ಶನಗೊಂಡ ಯಕ್ಷಗಾನ ಕಾರ್ಯಕ್ರಮವು ಸಭಿಕರ ಮೆಚ್ಚುಗೆಗೆ ಪಾತ್ರವಾಯಿತು.




ವೇದಿಕೆಯಲ್ಲಿ ಸಂಘದ ಪದಾಧಿಕಾರಿಗಳನ್ನು, ಕಾರ್ಯಕಾರಿ ಸಮಿತಿ ಸದಸ್ಯರುಗಳನ್ನು ಗೌರವಿಸಲಾಯಿತು. ಶುಚಿ–ರುಚಿಯಾದ ಭೋಜನದ ವ್ಯವಸ್ಥೆಯನ್ನು ಸಿದ್ಧಪಡಿಸಿದ ಬ್ರಾಹ್ಮಿ ಕ್ಯಾಟರರ್ಸ್‌ನ ಶ್ರೀ ಶರತ್ ಶೆಟ್ಟಿಯವರಿಗೂ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ತುಂಬು ಹೃದಯದ ಧನ್ಯವಾದಗಳು.




**ಚರಣ್‌ರಾಜ್ ಶೆಟ್ಟಿ**
ಸಂಚಾಲಕರು,
ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ

**ಮೂಡುಬಗೆ ಸಂತೋಷ್ ಕುಮಾರ್ ಶೆಟ್ಟಿ**
ಚೇರ್‌ಪರ್ಸನ್,
ಯಕ್ಷಗಾನ ಮತ್ತು ರಂಗತರಬೇತಿ ಸಮಿತಿ


ಹೃತ್ಪೂರ್ವಕ
ಅಭಿನಂದನೆಗಳು
ಪ್ರತಿಷ್ಠಿತ ಸೌತ್ ಇಂಡಿಯಾ ವುಮೆನ್ ಅಚೀವರ್ಸ್
ಅವಾರ್ಡ್ 2026 ಹಾಗೂ ಕರ್ನಾಟಕ ಟಿವಿ ಲೀಡರ್
ಅವಾರ್ಡ್ 2026ರ ಕರಾವಳಿ ಮಧ್ಯ ಕರ್ನಾಟಕದ
ಬೆಸ್ಟ್ ನಾಯಕಿ
ಪ್ರಶಸ್ತಿಗೆ
ಶ್ರೀಮತಿ ಕಾಂತಿ ಶೆಟ್ಟಿ
ಇವರು ಆಯ್ಕೆಯಾಗಿರುವುದು
ಬಂಟರಿಗೆ ಹೆಮ್ಮೆಯ ವಿಷಯ!
ಸಮಾಜಸೇವೆ, ಜನಪರ ಕಾಳಜಿ
ಹಾಗೂ ನಾಯಕತ್ವದ
ಮೂಲಕ ಗುರುತಿಸಿಕೊಂಡಿರುವ ಇವರಿಗೆ ಈ ಗೌರವ
ಸಂದಿರುವುದು ಅತ್ಯಂತ ಸಂತಸದ ಸಂಗತಿ.
ನಿಮ್ಮ ಸೇವಾ ಪಯಣ ಇನ್ನಷ್ಟು ಯಶಸ್ಸುಗಳನ್ನು ಕಾಣಲಿ
ಹಾಗೂ ಸಮಾಜಕ್ಕೆ ಸ್ಪೂರ್ತಿಯಾಗಲಿ.

ADVT.

## ಸಂಘಟನಾ, ವೃತ್ತಿಪರ ಹಾಗೂ ಸಾರ್ವಜನಿಕ ಜೀವನದ ಅನುಭವ

1. **2000ರಿಂದ** ಏರ್‌ಕಾಮ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ **ವ್ಯವಸ್ಥಾಪಕ ನಿರ್ದೇಶಕರಾಗಿ** ಯಶಸ್ವಿಯಾಗಿ ಕಾರ್ಯನಿರ್ವಹಣೆ.
2. **2012ರಿಂದ** – ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿರುವ **'ನಮ್ಮ ಕುಟೀರ'** ಸ್ವಯಂಸೇವಾ ಸಂಸ್ಥೆಯ **ಸಂಸ್ಥಾಪಕ ಟ್ರಸ್ಟಿಯಾಗಿ** ಸೇವೆ.
3. **2014–2016 – ಕಾರ್ಯಕಾರಿ ಸಮಿತಿ ಸದಸ್ಯೆ**** ಹಾಗೂ **ವಿವಾಹ ವೇದಿಕೆ ಸಮಿತಿ ಅಧ್ಯಕ್ಷೆ**, ಬಂಟರ ಸಂಘ ಬೆಂಗಳೂರು.
4. **2016–2018 – ಜೊತೆ ಕಾರ್ಯದರ್ಶಿಯಾಗಿ** ಸೇವೆ ಸಲ್ಲಿಸಿದ್ದು **ಸದಸ್ಯತ್ವ ಮತ್ತು ವೆಬ್‌ಸೈಟ್ ಸಮಿತಿಯ ಅಧ್ಯಕ್ಷೆಯಾಗಿ** ಸಂಘದ ವಿಸ್ತರಣೆ ಮತ್ತು ಆಧುನೀಕರಣಕ್ಕೆ ಕೊಡುಗೆ.
